# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 Volume:01 • ಸಂಚಿಕೆ:334 Issue:334 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 07.06.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2








# ಹಂಪಿಯಲ್ಲಿ ಮ್ಯಾಟ್ ಹಾಕಿಸಿ ಭಕ್ತರ ಆತಂಕ ದೂರಾಗಿಸಿದ ಡಿಸಿ

## ಭಕ್ತರು ಕಾಲಿಡಲಾಗದೆ ಓಡುತ್ತಿದ್ದ ವೀಡಿಯೋ ವೈರಲ್ ಬೆನ್ನಲ್ಲೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಕ್ರಮ | ಡಿಸಿ ಕ್ರಮಕ್ಕೆ ಭಕ್ತರು ಮೆಚ್ಚುಗೆ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ವಿರೂಪಾಕ್ಷೇಶ್ವರಸ್ವಾಮಿ ದರ್ಶನ ಪಡೆದು ಹೊರಬಂದ ಭಕ್ತರು ಬಿಸಿಲಿನ ತಾಪಮಾನಕ್ಕೆ ತತ್ತರಿಸುತ್ತಿದ್ದ, ಬಿಸಿ ಬಂಡೆಯ ಮೇಲೆ ನಡೆಯಲಾಗದ ಮಕ್ಕಳನ್ನು ಹೊತ್ತು ಓಡೋಡಿ ಬರುತ್ತಿದ್ದ ದೃಶ್ಯದ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಗುರುವಾರ ಮಧ್ಯಾಹ್ನ ವೈರಲ್ ಆದ ಬೆನ್ನಲ್ಲೆ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಕೂಡಲೇ ಭಕ್ತರಿಗೆ ಸಮಸ್ಯೆಯಾಗದಂತೆ ಮ್ಯಾಟ್ ಹಾಕಿಸಿ, ಭಕ್ತರ ಆತಂಕ ದೂರಾಗಿಸಿದ್ದಾರೆ.

ಮಳೆಗಾಲ ಆರಂಭವಾದರೂ ಬಿಸಿಲಿನ ತಾಪಮಾನ ತಗ್ಗಿಲ್ಲ. ಬಂಡೆಗಲ್ಲುಗಳ ನಡುವೆ ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನವಿರುವುದರಿಂದ ಬಿಸಿಲಿನ ತಾಪಮಾನ ಸಹಜವಾಗಿಯೇ ತುಸು ಹೆಚ್ಚಾಗಿರುತ್ತದೆ. ದೇವಸ್ಥಾನಕ್ಕೆ ಬರುವ ಭಕ್ತರು ಮತ್ತು ಪ್ರವಾಸಿಗರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಮಕ್ಕಳು, ಮಹಿಳೆಯರು, ವೃದ್ಧರು ಆಗಮಿಸುವುದರಿಂದ ತಾಪಮಾನದಿಂದ ಮುಕ್ತರಾಗಲು ಅಗತ್ಯವಿರುವೆಡೆ ನೆರಳಿನ ವ್ಯವಸ್ಥೆ ಕಲ್ಪಿಸಬೇಕೆಂದು ಭಕ್ತರು ಕೋರಿಕೆಯಾಗಿದ್ದು, ಭಕ್ತರ ಸಮಸ್ಯೆಗೆ ಸ್ಪಂದಿಸುತ್ತಿರುವ ಜಿಲ್ಲಾಧಿಕಾರಿಗೆ ಭಕ್ತರು ಧನ್ಯವಾದಗಳನ್ನು ತಿಳಿಸಿದ್ದಾರೆ.







**ಮೈಕ್ರೋ ನ್ಯೂಸ್**

## ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕು ವ್ಯಾಪ್ತಿಯಲ್ಲಿ 2024 – 25 ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಪಡೆಯಲು ಆನ್ ಲೈನ್ ಮೂಲಕ ಅರ್ಜಿಗಳನ್ನು ಕರೆಯಲಾಗಿರುತ್ತದೆ ಆಸಕ್ತ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಈ ಕೆಳಕಂಡ ವೆಬ್ ಸೈಟ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಬಹುದು

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ ಹರಪನಹಳ್ಳಿ ಇವರ ಕಚೇರಿ ಸಮಯದಲ್ಲಿ ಸಂಪರ್ಕಿಸುವುದು. ಜೂ.6 ರಿಂದ www.sw.kar.nic.in ವೆಬ್ ಸೈಟ್ ಬಳಸಿ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು ಎಂದು ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರೇಣುಕಾ ದೇವಿಯವರು ತಿಳಿಸಿದ್ದಾರೆ.

## ಜೂ.೯ ಮೇದಾರ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸನ್ಮಾನ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಮೇದಾರ ನೌಕರರ ಸೇವಾ ಬಳಗದವತಿಯಿಂದ ಜೂ.9 ರಂದು ಭಾನುವಾರ ಸಂಜೆ 5.30ಕ್ಕೆ ನಗರದ ಶ್ರೀ ಓಂಕಾರೇಶ್ವರ ಕಲ್ಯಾಣ ಮಂಟಪದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಗೌರವ ಸನ್ಮಾನ ಹಮ್ಮಿಕೊಂಡಿದೆ ಎಂದು ಬಳಗದ ಕಾರ್ಯದರ್ಶಿ ಕೆ.ಶಾಂತರಾಜ್ ಮೇದಾರ ತಿಳಿಸಿದ್ದಾರೆ.

# ಹಗರಣದಲ್ಲಿ ಸಿಎಂ ಭಾಗಿ, ಸಚಿವರ ಜೊತೆ ಸಿಎಂ ರಾಜೀನಾಮೆ ನೀಡಲಿ

## ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹ



**ಹಂಪಿ ಟೈಮ್ಸ್ ಬೆಂಗಳೂರು**

ಆರ್ಥಿಕ ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ನೇರವಾಗಿ ಶಾಮೀಲಾಗಿದ್ದಾರೆ. ಸಚಿವ ಬಿ.ನಾಗೇಂದ್ರ ಜೊತೆ ಮುಖ್ಯಮಂತ್ರಿ ಕೂಡ ರಾಜೀನಾಮೆ ನೀಡಬೇಕು ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ ಅವರು ಆಗ್ರಹಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಹಿನ್ನೆಲೆಯಲ್ಲಿ ಸಚಿವ ಬಿ.ನಾಗೇಂದ್ರ ಅವರ ತಕ್ಷಣದ ರಾಜೀನಾಮೆಗೆ ಆಗ್ರಹಿಸಿದ ಬಿಜೆಪಿ ನಾಯಕರು, ವಿಧಾನಸೌಧದಿಂದ ರಾಜಭವನವರೆಗೆ ತೆರಳಿ, ರಾಜ್ಯಪಾಲರಿಗೆ ದೂರು ಸಲ್ಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಆರ್.ಅಶೋಕ, ಸಚಿವ ಬಿ.ನಾಗೇಂದ್ರ ಅವರು ಈ ಪ್ರಕರಣದಲ್ಲಿ ಸಣ್ಣ ಆರೋಪಿ. ಇದಕ್ಕೂ ದೊಡ್ಡ ಆರೋಪಿಗಳು ಇದರ ಹಿಂದೆ ಇದ್ದಾರೆ. ಈ ಎಲ್ಲ ಸತ್ಯ ಹೊರಬರಲು ಪ್ರಕರಣವನ್ನು ಸಿಬಿಐಗೆ ನೀಡಬೇಕು. ಸಿಎಂ ಸಿದ್ದರಾಮಯ್ಯನವರು ಕೂಡಲೇ ರಾಜೀನಾಮೆ ನೀಡಬೇಕು. ಅಕ್ರಮದ ಹಣವನ್ನು ಸಚಿವರೊಬ್ಬರೇ ನುಂಗಿಲ್ಲ. ಇದರಲ್ಲಿ ಇಡೀ ಸಚಿವ ಸಂಪುಟ ಶಾಮೀಲಾಗಿದ್ದು, ಹಣ ಹೈದರಾಬಾದ್‌ಗೆ ಹೋಗಿ ನಂತರ ದೆಹಲಿಗೆ ತಲುಪಿದೆ. ನನ್ನ ಬುಡಕ್ಕೆ ಬಂದುಬಿಡುತ್ತದೆ ಎಂಬ ಕಾರಣಕ್ಕೆ ಸಿಎಂ ಸಿದ್ದರಾಮಯ್ಯ ಸಿಬಿಐ ತನಿಖೆ ಮಾಡಿಸಲು ಒಪ್ಪುತ್ತಿಲ್ಲ. ರಾಹುಲ್ ಗಾಂಧಿ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಕೂಡ ಇದಕ್ಕೆ ಉತ್ತರ ನೀಡಬೇಕು ಎಂದು ಆಗ್ರಹಿಸಿದರು. ಬಡವರಿಗೆ ಸೇರಬೇಕಾಗಿದ್ದ ಹಣ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೇಬಿಗೆ ಹೋಗಿದೆ. ಪರಿಶಿಷ್ಟ ಜಾತಿ, ಪಂಗಡದ ಹಣವನ್ನೂ ನುಂಗುತ್ತಾರೆ ಎನ್ನುವುದು ರಾಜ್ಯ ರಾಜಕೀಯದ ದುರಂತ. 14 ಬಾರಿ ಬಜೆಟ್ ಮಂಡಿಸಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿಕೊಳ್ಳುತ್ತಾರೆ. ಈಗ ಅವರ ಕಣ್ಣಿನಡಿಯಲ್ಲೇ ಹಗರಣ ನಡೆದಿದೆ.




ಬೆಂಗಳೂರಿನಲ್ಲಿ ನನ್ನ ಸ್ವ ಇಚ್ಛೆಯಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ ಎಂದು ಸಚಿವ ಬಿ.ನಾಗೇಂದ್ರ ಸಿಎಂ ಸಿದ್ದರಾಮ್ಯಯನವರಿಗೆ ಗುರುವಾರ ರಾತ್ರಿ ರಾಜೀನಾಮೆ ಸಲ್ಲಿಸಿದರು. ಡಿಸಿಎಂ ಡಿಕೆ ಶಿವಕುಮಾರ್, ವಕ್ಫ್ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಖಾನ್ ಇದ್ದರು.

ಒಂದು ವರ್ಷ ಕಾಂಗ್ರೆಸ್ ಸರ್ಕಾರ ಲೂಟಿ ಗ್ಯಾರಂಟಿಯನ್ನು ನೀಡಿದೆ ಎಂದು ದೂರಿದರು. ಲೂಟಿಕೋರರ ಪಾರ್ಟಿ ಕಾಂಗ್ರೆಸ್ ನುಡಿದಂತೆ ನಡೆಯುತ್ತೇವೆ ಎಂದು ಹಣ ಕೊಳ್ಳೆ ಹೊಡೆದಿದ್ದಾರೆ. ಯಾವುದೇ ಪ್ರಕರಣದಲ್ಲಿ ಒಂದೇ ಬಾರಿಗೆ ಎರಡು ಸಂಸ್ಥೆಯಿಂದ ತನಿಖೆ ನಡೆಸಲು ಸಾಧ್ಯವಿಲ್ಲ. ಆದರೆ ಸಿಬಿಐ ಮಾಡಬೇಕಾದ ತನಿಖೆಯನ್ನು ಎಸ್‌ಐಟಿಗೆ ವಹಿಸಲಾಗಿದೆ. ಈ ಎಟಿಎಂ ಸರ್ಕಾರ ಟಕಾಟಕ್ ಎಂದು ಹಣ ವರ್ಗಾವಣೆ ಮಾಡಿಕೊಂಡಿದೆ. ಇನ್ನೂ ಯಾವ ನಿಗಮಗಳಲ್ಲಿ ಎಷ್ಟು ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ? ಎಷ್ಟು ಬೇನಾಮಿ ಖಾತೆಗಳಿಗೆ ಹಣ ಹೋಗಿದೆ ಎಂದು ಪತ್ತೆಯಾಗಬೇಕು. ಸಚಿವರ ಆಪ್ತ ಸಹಾಯಕ ಇದರಲ್ಲಿ ಶಾಮೀಲಾಗಿದ್ದಾನೆ ಎಂದರೆ ಸಚಿವರು ಕೂಡ ಶಾಮೀಲಾಗಿದ್ದಾರೆ ಎಂದರು.

ನಾಲ್ಕು ಹಂತದ ಹೋರಾಟ ರಾಜ್ಯಪಾಲರಿಗೆ ಈ ಕುರಿತು ವಿವರ ನೀಡಿದ್ದೇವೆ. ಬಿಜೆಪಿ ನಾಲ್ಕು ಹಂತಗಳಲ್ಲಿ ಇದರ ವಿರುದ್ಧ ಹೋರಾಟ ಮಾಡಲಿದೆ. ಸಚಿವರು ಹಾಗೂ ಮುಖ್ಯಮಂತ್ರಿಯವರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ ಮಾಡುತ್ತಿದ್ದೇವೆ. ಈ ಸರ್ಕಾರವನ್ನು ವಜಾ ಮಾಡಬೇಕು ಎಂದು ಕೂಡ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದೇವೆ. ಇನ್ನೂ ಸಚಿವರ ಪರ ನಿಲ್ಲುತ್ತಿರುವ ಸಿಎಂ ಸಿದ್ದರಾಮಯ್ಯನವರಿಗೆ ಜನರೇ ತಕ್ಕ ಉತ್ತರ ನೀಡಲಿದ್ದಾರೆ ಎಂದರು.

# ಶ್ರೀ ಶನೇಶ್ವರ ಜಯಂತಿ ವಿಶೇಷ ಪೂಜೆ ಅಲಂಕಾರ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಹೊರವಲಯದ ಪಂಚಾಚಾರ್ಯ ನಗರದಲ್ಲಿರುವ ಶ್ರೀಕ್ಷೇತ್ರ ಶನೇಶ್ವರ ದೇವಸ್ಥಾನದಲ್ಲಿ ಶ್ರೀ ಶನೇಶ್ವರ ಜಯಂತಿ ನಿಮಿತ್ತ ಶ್ರೀಸ್ವಾಮಿಗೆ ಗುರುವಾರ ವಿಶೇಷ ಪೂಜೆ, ಅಭಿಷೇಕ, ಪುಷ್ಪಲಂಕಾರ ನೆರವೇರಿಸಲಾಯಿತು.

ಬುಧವಾರ ರಾತ್ರಿ ದೇವಸ್ಥಾನದಲ್ಲಿ ಶ್ರೀ ಶನೇಶ್ವರ ಪುರಾಣ ಪ್ರವಚನ, ಭಜನೆ ಜರುಗಿದವು. ಗುರುವಾರ ಬೆಳಿಗ್ಗೆ ಶ್ರೀಸ್ವಾಮಿಯ ಉತ್ಸವ ಮೂರ್ತಿಯೊಂದಿಗೆ ತುಂಗಭದ್ರಾ ಜಲಾಶಯದ ಹಿನ್ನೀರಿಗೆ ತೆರಳಿ ಗಂಗಾಪೂಜೆ ನೆರವೇರಿಸಿ ಗಂಗೆ ಸಮೇತ ದೇವಸ್ಥಾನಕ್ಕೆ ವಾದ್ಯಗಳೊಂದಿಗೆ ಮರಳಿದರು. ಶ್ರೀ ವಿಘ್ನೇಶ್ವರ, ಶ್ರೀ ಶನೇಶ್ವರ ಮತ್ತು ಜ್ಯೇಷ್ಠಾದೇವಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ವಿಶೇಷ ಹೂವಿನ ಅಲಂಕಾರ, ಶ್ರೀ ಶಾಂತಲಿಂಗೇಶ್ವರ, ಶ್ರೀ ಶಾಂಭವಿ ಮಾತೆ, ಶ್ರೀನಂದಿ, ನವಗ್ರಹಗಳಿಗೆ ಹಾಗೂ ಶ್ರೀ ಕಾಳಿಕಾ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಎಸ್ಪಿ ಬಿ.ಎಲ್.ಶ್ರೀಹರಿಬಾಬು ದರ್ಶನ ಪಡೆದರು. ನಿರೀಕ್ಷೆಗೂ ಮೀರಿ ಭಕ್ತರು ಆಗಮಿಸಿದ್ದರಿಂದ ಪೊಲೀಸರು ಟ್ರಾಫೀಕ್ ಸಮಸ್ಯೆಯಾಗದಂತೆ ಭದ್ರತೆ ಒದಗಿಸಿ, ಭಕ್ತರಿಗೆ ಅನುಕೂಲ ಕಲ್ಪಿಸಿದರು. ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ಹಾಲನಗೌಡ, ಸಮಿತಿಯ ಅಂಜಿನಪ್ಪ ಸೇರಿದಂತೆ ಸಮಿತಿ ಸದಸ್ಯರು ಧಾರ್ಮಿಕ ಕಾರ್ಯಗಳನ್ನು ಅಚ್ಚುಕಟ್ಟಾಗಿ ನೆರವೇರಿಸಿದರು.











## ಓದುಗರ ಓಲೆ

# ಗ್ರಾಮಕ್ಕೊಂದಿರಲಿ ಗ್ರಂಥಾಲಯ



ಇಂದಿನ ಆಧುನಿಕ ಯುಗದಲ್ಲಿ ಯುವಕ-ಯುವತಿಯರು, ವಿದ್ಯಾರ್ಥಿಗಳು ಹೆಚ್ಚಾಗಿ ಮೊಬೈಲ್ ದಾಸರಾಗುತ್ತಿದ್ದಾರೆ. ಒಂದು ಹೊತ್ತು ಊಟ ಮಾಡುವುದನ್ನು ಬಿಡುತ್ತಾರೆಯೇ ಹೊರತು ಮೊಬೈಲ್ ಬಳಸುವುದನ್ನು ಮಾತ್ರ ಬಿಡುವುದಿಲ್ಲ. ಹುಟ್ಟಿದ ಮಕ್ಕಳಿಗೂ ಕೂಡ ಮೊಬೈಲ್ ಭೂತರೋಗದಂತೆ ಅಂಟಿಕೊಂಡಿದೆ. ಇದರಿಂದ ಯುವಕ-ಯುವತಿಯರಿಗೆ ಹಾಗೂ ವಿದ್ಯಾರ್ಥಿಗಳಿಗೆ ಪುಸ್ತಕಗಳ ಮೇಲಿನ ಒಲವು ತುಂಬಾ ಕಡಿಮೆಯಾಗಿರುವುದು ಬಹಳ ದುಃಖಕರವಾದ ಸಂಗತಿ. ಈಗಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಓದಲು ಉತ್ತಮವಾದ ಪುಸ್ತಕಗಳು ಲಭ್ಯವಿದ್ದರೂ ಅವುಗಳನ್ನು ಕೊಂಡುಕೊಂಡು ಓದುವರಿಲ್ಲದೇ ಮೂಲೆ ಗುಂಪು ಸೇರಿವೆ. ಈಗೀನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಉತ್ತಮವಾದ ಪುಸ್ತಕಗಳು ಬೇಕಾದಷ್ಟು ನಮಗೆ ದೊರೆಯುತ್ತಿವೆ. ಆದ್ದರಿಂದ ರಾಜ್ಯದಲ್ಲಿ ಪ್ರತಿಯೊಂದು ಹಳ್ಳಿ-ಹಳ್ಳಿಗೂ ನಮ್ಮ ಸರ್ಕಾರ ಊರಿಗೊಂದು ಶಾಲೆಯನ್ನು ನಿರ್ಮಿಸಿದಂತೆ, ಪ್ರತಿಯೊಂದು ಗ್ರಾಮಕ್ಕೆ ಒಂದು ಗ್ರಂಥಾಲಯವನ್ನು ನಿರ್ಮಿಸಿ ಓದುಗರ ಅಭಿರುಚಿಗೆ ತಕ್ಕಂತೆ ಪುಸ್ತಕಗಳು ಗ್ರಂಥಾಲಯಗಳಲ್ಲಿ ದೊರೆಯುವಂತೆ ಮಾಡಬೇಕು. ಈ ಮೂಲಕ ಓದುಗರಿಗೆ ಒಂದು ಉತ್ತಮವಾದ ಅವಕಾಶವನ್ನು ಮಾಡಿದಂತಾಗುತ್ತದೆ. ಯುವಕರು ಮೊಬೈಲ್ ದಾಸರಾಗುವುದನ್ನು ತಪ್ಪಿಸಲು ಇದೊಂದು ಉತ್ತಮವಾದ ಮಾರ್ಗವಾಗಿದೆ. ಸಮಾಜದಲ್ಲಿ ಗ್ರಂಥಾಲಯದ ಮಹತ್ವವನ್ನು ಇಂದಿನ ಯುವ ಜನತೆಗೆ



ತಿಳಿಯುವಂತ ಕೆಲಸ ಕಾರ್ಯಗಳನ್ನು ನಮ್ಮ ಸರ್ಕಾರ ರೂಪಿಸಬೇಕು. ಎಷ್ಟೋ ವಿದ್ಯಾರ್ಥಿಗಳು ತಮ್ಮ-ತಮ್ಮ ಊರುಗಳಲ್ಲಿ ಓದಲು ಗ್ರಂಥಾಲಯಗಳು ಇಲ್ಲದೇ ಬೇರೆ-ಬೇರೆ ಕಡೆಗೆ ಹೋಗಿ ಹಣವನ್ನು ಕಟ್ಟಿ ಓದುವ ಪರಿಸ್ಥಿತಿ ಬಂದಿರುವುದಂತು ಸುಳ್ಳಲ್ಲ. ಹಾಗಾಗಿ ತಮ್ಮ ತಮ್ಮ ಊರುಗಳಲ್ಲಿ ಗ್ರಂಥಾಲಯವಾಗಬೇಕು ಎಂಬುದು ಎಷ್ಟೋ ವಿದ್ಯಾರ್ಥಿಗಳ ಆಸೆಯನ್ನು ನಮ್ಮ ಸರ್ಕಾರ ಆದಷ್ಟು ಬೇಗ ಈಡೇರಿಸಿ, ಯುವಜನತೆಯು ಮೊಬೈಲ್ ದಾಸರಾಗುವ ಬದಲು ಪುಸ್ತಕ ಪ್ರೇಮಿಗಳಾಗುವಂತೆ ಮಾಡಬೇಕು.. ಯುವಜನತೆಯು ಹೆಚ್ಚಾಗಿ ಮೊಬೈಲ್ ಬಳಸದೇ ಪುಸ್ತಕ ಓದುವ ಕಡೆ ಗಮನ ಹರಿಸಬೇಕು. ದಿನ ಪತ್ರಿಕೆಗಳನ್ನು, ಮ್ಯಾಗ್‌ಜೀನ್‌ಗಳನ್ನು, ಉತ್ತಮವಾದ ಸಾಹಿತಿಗಳ ಪುಸ್ತಕಗಳನ್ನು, ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಪುಸ್ತಕಗಳು ಗ್ರಂಥಾಲಯಗಳಲ್ಲಿ ಸಿಗುವಂತೆ ಮಾಡಿದಾಗ ಓದುಗರಿಗೆ, ಯುವಜನತೆಗೆ, ವಿದ್ಯಾರ್ಥಿಗಳಿಗೆ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ. ಇಂದಿನ ಯುಗದಲ್ಲಿ ಗ್ರಂಥಾಲಯಗಳು ಕಣ್ಮರೆಯಾಗುತ್ತಿವೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಆದಷ್ಟು ಬೇಗ ಎಚ್ಚೆತ್ತುಕೊಂಡು ಹೊಸ ಮಾದರಿಯ ಗ್ರಂಥಾಲಯಗಳನ್ನು ಊರಿಗೊಂದು ನಿರ್ಮಿಸಬೇಕು.

– **ಆಕಾಶ್ ಗೌಡ್ರ**, ಹೊಸಪೇಟೆ.

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ
ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

– ಜಾಹೀರಾತು ವ್ಯವಸ್ಥಾಪಕರು.

ಜ್ಞಾನದಾ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯಾ ಬಲದಿಂದ ತಮಂಧದ ಕೇಡು ನೋಡಯ್ಯಾ

# ಜ್ಞಾನಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ!

ಬಸವಣ್ಣನವರ ಈ ವಚನದಲ್ಲಿ ಶರಣರ ಅನುಭಾವವಿದೆ. ಜನನ-ಮರಣಗಳನ್ನು ದಾಟುವುದು ಹೇಗೆಂದು ತಿಳಿಸಲಾಗಿದೆ. ಅವರು ಹೇಳಿದಂತೆ ಜ್ಞಾನ ಎಂದರೆ ಅರಿವು. ಜ್ಞಾನಕ್ಕಿಂತ ಮಿಗಿಲಾದುದು ಜಗತ್ತಿನಲ್ಲಿ ಯಾವುದೂ ಇಲ್ಲ. ಇಂತಹ ಜ್ಞಾನವನ್ನು ಪಡೆಯುವುದಕ್ಕೆ ಬೇಕಾಗಿರುವುದು ವಿನಯವಂತಿಕೆ. ಮನುಷ್ಯನಿಗೆ ವಿನಯವಂತಿಕೆಯ ಸಂಪಾದನೆ ಮಹಾಜ್ಞಾನದಿಂದ ಬರುತ್ತದೆ. ಜ್ಞಾನಕ್ಕೆ ವಿನಯವೇ ಭೂಷಣವಾಗಿರುವುದರಿಂದ ಜಗತ್ತಿನಲ್ಲಿ ಇದಕ್ಕಿಂತ ಸಂಪತ್ತು ಬೇರೊಂದಿಲ್ಲ. ಜ್ಞಾನ ಕಲಿಯುವುದಕ್ಕೆ ವಯಸ್ಸಿನ ಮಿತಿಯಿಲ್ಲ. ವಿದ್ಯೆ ಇದ್ದವನ ಮುಖವು ಮುದ್ದು ಬರುವಂತೆ, ವಿದ್ಯೆಯಿಲ್ಲದವನ ಮುಖವು ಹಾಳೂರು ಹದ್ದಿನಂತೆ. ವಿದ್ಯೆಗೆ ಕೊನೆಯಿಲ್ಲ ಬುದ್ಧಿಗೆ ಬೆಲೆಯಿಲ್ಲ ಎಂಬುದು ಸರ್ವಜ್ಞನ ಅಭಿಪ್ರಾಯ. ಸಂಪಾದಿಸಿದ ವಿದ್ಯೆಯನ್ನು ಯಾರೂ ಕಸಿದುಕೊಳ್ಳಲಾರರು ಎಂಬುದು ಜನಪದರ ನಂಬಿಕೆ.

ಜ್ಞಾನದ ಆಳ ಸಾಗರದಷ್ಟು, ಅಗಲ ಆಕಾಶದಷ್ಟು. ಪ್ರಕೃತಿಯಿಂದಲೂ ನಾವು ಕಲಿತುಕೊಳ್ಳುವುದಕ್ಕೆ ಬೇಕಾಗಿರುವುದು ಸೂಕ್ಷ್ಮವಾದ ಮನಸ್ಸು ಅಷ್ಟೆ. ಈಗಿನ ಜ್ಞಾನಕ್ಕೆ ಮತ್ತಷ್ಟು ಪಡೆಯುವಾಗ ನಾನೇ ಜಾಣನೆಂಬ ಅಹಂಕಾರ ಹತ್ತಿರ ಸುಳಿಯಲು ಬಿಡಬಾರದು. ಆಗ ಮಾತ್ರ ಮತ್ತಷ್ಟು ಪಡೆದ ಜ್ಞಾನಕ್ಕೆ ಮೌಲ್ಯ ಬರುತ್ತದೆ.

ಜೀವನದಲ್ಲಿ ಅನುಭವಿಸುತ್ತಿರುವ ಕಷ್ಟ ಸುಖಗಳಿಗೆ ಬೇರೇ ಯಾರೂ ಕಾರಣರಲ್ಲ. ನಮ್ಮೊಳಗಿರುವ ಅಂಧಕಾರದಲ್ಲಿರುವ ಅಜ್ಞಾನದ ವಿಚಾರಗಳೇ ಕಾರಣ. ನಮ್ಮ ಕಷ್ಟ ನಷ್ಟಗಳಿಗೆ ಇನ್ನೊಬ್ಬರನ್ನಾಗಲಿ, ದೇವರನ್ನಾಗಲಿ ದೂಷಿಸುವುದು ಸರಿಯಲ್ಲ. ಜೀವನದ ಜಂಜಡಗಳಲ್ಲಿ ಸಿಲುಕಿರುವ ನಾವು ಕೇವಲ ಸಂಪತ್ತಿಗಾಗಿ ನಮ್ಮನ್ನು ನಾವು ಕಳೆದುಕೊಂಡಿದ್ದೇವೆ. ಹಸಿದ ನಾಯಿ ಯಾವುದೋ ಪ್ರಾಣಿಯ ಎಲುಬನ್ನು ಜಗಿದು ಜಗಿದು ತಿನ್ನುವಾಗ ತನ್ನ ಬಾಯಿಯಿಂದಲೇ ಬರುವ ರಕ್ತದ ರುಚಿಗೆ ಮನಸೋತು ಮತ್ತೆ ಮತ್ತೆ ನೆಕ್ಕುವಂತೆ, ಮನದ ಶಾಂತಿ ಸಮಾಧಾನಕ್ಕಾಗಿ ಪ್ರಾಪಂಚಿಕ ವಸ್ತುಗಳ ಬೆನ್ನ ಹಿಂದೆ ನಾವು ಬಿದ್ದಿದ್ದೇವೆ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Hampi Times E-paper
SCAN AND READ

ಭಗವಂತ ನಮಗೆ ಬುದ್ಧಿಶಕ್ತಿಕೊಟ್ಟಿರುವುದರಿಂದ ಜಗತ್ತಿನಲ್ಲಿ ಯಾವುದು ಶಾಶ್ವತ ಯಾವುದು ಅಶಾಶ್ವತವೆಂದು ತಿಳಿಯುವುದೇ ಜ್ಞಾನಯೋಗವಾಗಿದೆ. ಒಳಗಣ್ಣಿನಿಂದ ವಿಶ್ವವನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಾ ಚರಾಚರ ವಸ್ತುಗಳ ಬದುಕು ಬದಲಾವಣೆಗಳನ್ನು ಅರ್ಥೈಸಿಕೊಳ್ಳಬೇಕು. ಜಗತ್ತಿನಲ್ಲಿ ನಾವು ನಮ್ಮ ಅಸ್ತಿತ್ವವನ್ನು



ಉಳಿಸಿಕೊಳ್ಳಲು ಅಥವಾ ಮತ್ತೊಬ್ಬರ ಗಮನ ಸೆಳೆಯಲು ಹೋರಾಟ ಮಾಡುತ್ತಿರುತ್ತೇವೆ.

ನಮ್ಮ ನಡೆ ನುಡಿ, ನಾವು ಮಾಡುವ ಕಾಯಕ-ದಾಸೋಹಗಳು ಇತರರು ಮೆಚ್ಚುವಂತಿರಬೇಕು. ಆದರೆ ಹಾಗೆ ಬೇರೆಯವರನ್ನು ಮೆಚ್ಚಿಸುವುದೇ ಜೀವನದ ಗುರಿಯಾಗಿರಬಾರದು. ಇಂದಿನ ಬಹಿರಂಗದ ಆಡಂಬರತೆಯಲ್ಲಿ ಜನಮೆಚ್ಚುಗೆಯನ್ನೇ ನೆಚ್ಚಿಕೊಂಡು ಕುಳಿತ್ತಿದ್ದೇವೆ. ಯಾರಿಗೋ ಒಳ್ಳೆಯವರಾಗುವುದಕ್ಕಿಂತ ಮೊದಲು ಲಿಂಗ ಮೆಚ್ಚಿ ಅಹುದಹುದುವೆಂಬಂತೆ ಬಾಳಬೇಕು. ಸದ್ಗುರುವು ಕರುಣಿಸಿದ ಜ್ಞಾನದಿಂದ ಜಾಗೃತರಾಗಿ ಒಳ್ಳೆಯದನ್ನೇ ಮಾಡಲು ಮುಂದಾಗಬೇಕು. ಅಕ್ಕಮಹಾದೇವಿ ಹೇಳಿದಂತೆ:

**ಕಣ್ಗೆ ಶೃಂಗಾರ ಗುರು-ಹಿರಿಯರ ನೋಡುವುದು**
**ಕರ್ಣಕ್ಕೆ ಶೃಂಗಾರ ಪುರಾತರ ಸಂಗೀತಗಳ ಕೇಳುವುದು**
**ವಚನಕ್ಕೆ ಶೃಂಗಾರ ಸತ್ಯವ ನುಡಿವುದು**
**ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ**
**ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು**
**ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ**
**ಚನ್ನಮಲ್ಲಿಕಾರ್ಜುನಾ.**

ಅಂದರೆ ಭಗವಂತ ಕೊಟ್ಟಿರುವ ಕಣ್ಣು, ಕಿವಿ, ಮೂಗು, ನಾಲಿಗೆ, ಕೈಗಳನ್ನು ಒಳ್ಳೆಯ ಆಚಾರ-ವಿಚಾರಗಳಿಗೆ ಬಳಸಿಕೊಳ್ಳುವುದು. ಜೀವನದಲ್ಲಿ ನಾವು ಜ್ಞಾನಿಗಳಾಗಬೇಕೆಂದರೆ ಇದಕ್ಕೆ ಅಡ್ಡಿಯಾಗಿರುವ ಅರಿಷಡ್ವರ್ಗಗಳನ್ನು ಮೆಟ್ಟಿನಿಂತು ಧರ್ಮ, ಅರ್ಥ, ಕಾಮ,ಮೋಕ್ಷವನ್ನು ಹತೋಟಿಯಲ್ಲಿಟ್ಟು ಕೊಳ್ಳಬೇಕು. ನಾವು ಮಾಡುವ ಎಲ್ಲ ಕಾಯಕಗಳಿಗೆ ಮೂಲ ನಿಯಂತ್ರಣವಿರುವುದು ನಾವು ಪಡೆದ ಜ್ಞಾನದಲ್ಲಿ. ನಮ್ಮ ಚಿಂತನೆಗಳು ಜ್ಞಾನಕ್ಕೆ ಪೂರಕವಾದ ಕಾಯಾ,ವಾಚಾ,ಮನಸಾ,ಕರ್ಮಗಳಿಗನುಗುಣವಾಗಿರುತ್ತವೆ. ಆದ್ದರಿಂದ ನಮ್ಮ ಜ್ಞಾನವನ್ನು ಆತ್ಮೋನ್ನತ್ತಿಗೆ ಬಳಸಿಕೊಂಡು ಈ ಆತ್ಮವನ್ನು ಪರಮಾತ್ಮನಲ್ಲಿ ಲೀನಗೊಳಿಸಬೇಕು.

ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಔದಾರ್ಯದ ಗುಣಗಳೇ ಮಾಯವಾಗಿವೆ. ನಮ್ಮಲ್ಲಿ ವೈಜ್ಞಾನಿಕತೆ ಬೆಳೆದಂತೆಲ್ಲಾ ಮಾನವೀಯ ಗುಣಗಳು ಕಣ್ಮರೆಯಾಗುತ್ತಿವೆ.ನಮ್ಮ ಹುಟ್ಟು ಸಾರ್ಥಕವಾಗಬೇಕಾದರೆ ನಾವು ಪಡೆದ ಜ್ಞಾನದಿಂದ ಜನತೆಗಾಗಿ ಏನನ್ನಾದರೂ ಸಹಾಯ ಮಾಡಬೇಕು. ಲಭಿಸಿದ ಜ್ಞಾನದಿಂದ ಉತ್ತಮ ಆಹಾರ-ವಿಹಾರ, ಸಂಸ್ಕೃತಿ-ಸಂಸ್ಕಾರಗಳನ್ನು ಪಡೆದು ಶರೀರವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಆದರೂ ಮೃತ್ಯು ಯಾವ ಗಳಿಗೆಯಲ್ಲಿ ನಮ್ಮನ್ನು ಎಳೆದೊಯ್ಯುವುದೋ ತಿಳಿಯದು. ಹಾಗಾಗಿ ಧರ್ಮ ಪರಿಪಾಲನೆಯಲ್ಲಿ ತೊಡಗಿಸಿಕೊಂಡು ಜೀವಂತವಿರುವಾಗಲೇ ವಿವೇಕಯುತವಾಗಿ ಪಂಚಭೂತಗಳ ಋಣವನ್ನು ತೀರಿಸಿ ಮನಸ್ಸನ್ನು ಮುಕ್ತಿಪಥದೆಡೆಗೆ ತಿರುಗಿಸಬೇಕು.

# ಅಜ್ಞಾನದ ಆರ್ಭಟ ಮತ್ತು ಜ್ಞಾನದ ಮೌನ

ಅದೊಂದು ಪುಟ್ಟ ಹಳ್ಳಿ. ಆ ಹಳ್ಳಿಯಲ್ಲಿ ಯುವಕರದೊಂದು ಸಂಘವಿತ್ತು. ಆಗಾಗ ನಾಟಕ, ಯಕ್ಷಗಾನ ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತಾ ಊರಿನ ಜಾತ್ರೆ, ಹಬ್ಬ, ಹುಣ್ಣಿಮೆಗಳಲ್ಲಿ ಎಲ್ಲರನ್ನು ಹುರಿದುಂಬಿಸಿ ಕಾರ್ಯಕ್ರಮಗಳನ್ನು ಮಾಡುತ್ತಾ ಜನರ ಮೆಚ್ಚುಗೆಗೆ ಪಾತ್ರವಾಗಿದ್ದ ಜಯಣ್ಣ ಉಳಿದೆಲ್ಲ ಯುವಕರಿಗಿಂತ ತುಸು ದೊಡ್ಡವನಾಗಿದ್ದ. ಆತನ ಮುಂದಾಳತ್ವದಲ್ಲಿಯೇ ಎಲ್ಲಾ ಕೆಲಸ ಕಾರ್ಯಗಳು ನಡೆಯುತ್ತಿದ್ದವು.

ಒಂದು ಗುಂಪು ಎಂದ ಮೇಲೆ ಅಲ್ಲಿ ಎಲ್ಲ ತರಹದ ಜನರೂ ಇರಬೇಕಲ್ಲವೇ? ಅಂತೆಯೇ ಅ ಗುಂಪಿನಲ್ಲಿ ಚಂದ್ರ ಎಂಬ ಅಂದದ ಅಹಂಕಾರಿ ಯುವಕನು ಇದ್ದ. ಸೋಮು ಎಂಬ ಒಳ್ಳೆಯ ಆದರೆ ಅಷ್ಟೇ ಸ್ವಾಭಿಮಾನಿಯಾದ ಯುವಕ ಆ ಗುಂಪಿನ ಭಾಗವಾಗಿದ್ದು ಜಯಣ್ಣನ ಬಲಗೈಯಂತೆ ಕೆಲಸ ಮಾಡಿ ಊರಿನವರ ಮೆಚ್ಚುಗೆಗೆ ಪಾತ್ರನಾಗಿದ್ದ.


ಒಂದು ಬಿಡುವಿನ ದಿನ ಊರ ಹೊರಗಿನ ಆಲದ ಮರದಡಿಯಲ್ಲಿ ಎಲ್ಲ ಸ್ನೇಹಿತರು ಕುಳಿತು ಹರಟೆ ಹೊಡೆಯುತ್ತಿದ್ದಾಗ ಚಂದ್ರ ದೂರ ದಿಗಂತವನ್ನು ದಿಟ್ಟಿಸಿ ನೋಡುತ್ತಿದ್ದ. ಅದನ್ನು ನೋಡಿದ ಸೋಮು ಮತ್ತಿತರ ಸ್ನೇಹಿತರು ಚಂದ್ರನಿಗೆ ಏನನ್ನು ನೋಡುತ್ತಿರುವೆ? ಎಂದು ಕೇಳಿದರು. ಅದಕ್ಕುತ್ತರವಾಗಿ ಚಂದ್ರ ಭೂಮಿ ಬಾನುಗಳು ಒಂದಾಗುವ ಆ ಜಾಗವನ್ನು ನೋಡುತ್ತಿರುವೆ ಎಂದು ಹೇಳಿದ. ಜೋರಾಗಿ ನಕ್ಕ ಸೋಮು ಭೂಮಿ ಬಾನು ಎಂದಾದರೂ ಒಂದಾಗುತ್ತವೆಯೇ??ಇದು ನಿನ್ನ ಭ್ರಮೆ! ಎಂದು ಹೇಳಿದ. ತಾನು ಹಿಡಿದ ಮೊಲಕ್ಕೆ ಮೂರೇ ಕಾಲು ಎಂಬಂತೆ ಇದ್ದ ಚಂದ್ರನ ಅಹಂಭಾವಕ್ಕೆ ಪೆಟ್ಟು ಬಿದ್ದು ಖಂಡಿತವಾಗಿಯೂ ಜಗತ್ತಿನ ಯಾವುದೋ ಒಂದು ಅಂಚಿನಲ್ಲಿ ಭೂಮಿ ಬಾನು ಒಂದಾಗುತ್ತದೆ ಎಂದು ವಾದಿಸಿದ. ಸೋಮು ತನ್ನ ಪಟ್ಟು ಬಿಡಲಿಲ್ಲ,ಅತ್ತ ಚಂದ್ರನೂ ಒಪ್ಪಿಕೊಳ್ಳಲು ತಯಾರಿಲ್ಲ.... ವಾದ ಹೀಗೆಯೇ ಮುಂದುವರೆದು ಊಟದ ಹೊತ್ತಾಯಿತು ಎಲ್ಲಾ ಸ್ನೇಹಿತರು ಅದೆಷ್ಟೇ ಹೇಳಿದರೂ ಇವರು ತಮ್ಮ ವಾದವನ್ನು ಮುಂದುವರಿಸಿದರು. ಬೇಸತ್ತ ಎಲ್ಲರೂ ಜಾಗ ಖಾಲಿ ಮಾಡುವ ಹೊತ್ತಿಗೆ ಜಯಣ್ಣ ಅಲ್ಲಿಗೆ ಬಂದನು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ವಾದ ವಿವಾದಗಳು ತಾರಕಕ್ಕೇರಿ ವಾತಾವರಣ ಕೊಂಚ ಬಿಗುವಾಗಿದ್ದನ್ನು ಗಮನಿಸಿದ ಜಯಣ್ಣ ಎಲ್ಲವನ್ನು ಕೇಳಿ ತಿಳಿದುಕೊಂಡನು.ಸೋಮುವಿನ ಪರವಾಗಿ ಕೆಲವರು ಮಾತನಾಡಿದರೆ, ಮತ್ತೆ ಒಂದಿಬ್ಬರು ಚಂದ್ರ ಹೇಳಿದ್ದೆ ಸರಿ ಎಂದು ವಾದಿಸಿದರು. ಎಲ್ಲರೂ ಅಂತಿಮವಾಗಿ ಜಯಣ್ಣ ನೀನೇ ಹೇಳು ಎಂದು ಒಕ್ಕೊರಳಿನಿಂದ ಕೇಳಿದರು.



ನಸುನಕ್ಕ ಜಯಣ್ಣ ಚಂದ್ರ ಹೇಳಿದ್ದು ಸರಿಯಾಗಿದೆ ಎಂದನು. ಇದರಿಂದ ಬಹಳ ಖುಷಿಯಾದ ಚಂದ್ರ "ನೋಡಿದಿಯಾ ನಾನು ಹೇಳಿದ್ದೇ ಕರೆಕ್ಟ್.... ಯಾವುದೋ ಒಂದು ಅಂಚಿನಲ್ಲಿ ಭೂಮಿ ಮತ್ತು ಬಾನು ಒಂದಾಗುತ್ತವೆ" ಎಂದು ಪದೇ ಪದೇ ಹೇಳಿ ಸೋಮುವನ್ನು ಗೇಲಿ ಮಾಡಿ ನಕ್ಕು ಹೊರಟು ಹೋದನು.

ಈಗಾಗಲೇ ಚಂದ್ರನ ನಡತೆಯಿಂದ ತಲೆ ಬಿಸಿ ಮಾಡಿಕೊಂಡಿದ್ದ ಸೋಮು,ಚಂದ್ರು ಅತ್ತ ಹೋಗುತ್ತಲೇ, ಇದೇನು ಜಯಣ್ಣ ನೀವು ಹೀಗೆ ಹೇಳಿಬಿಟ್ರೀ... ಆಕಾಶ ಭೂಮಿ ಎಂದಾದರೂ ಒಂದಾಗೋಕೆ ಸಾಧ್ಯನಾ? ಅಂತ ಕೇಳಿದ.

ಮತ್ತದೇ ನಸುನಗೆಯನ್ನು ಸೂಸುತ್ತಾ ಜಯಣ್ಣ ಹೇಳಿದ "ಆಕಾಶ ಮತ್ತು ಭೂಮಿ ಎಂದೂ ಒಂದಾಗೋಕ್ಕೆ ಸಾಧ್ಯ ಇಲ್ಲ" ಅಂತ. "ಮತ್ತೆ ಈ ಮಾತನ್ನ ಚಂದ್ರನ ಮುಂದೆ ಯಾಕೆ ಹೇಳಲಿಲ್ಲ ಜಯಣ್ಣ ನೀವು" ಅಂತ ತುಸು ಮುನಿಸಿನಿಂದಲೇ ಸೋಮು ಕೇಳಿದ.

ಉತ್ತರವಾಗಿ ಜಯಣ್ಣ "ತಪ್ಪು ನಿನ್ನದೇ ಸೋಮು, ನಿನ್ನಂತಹ ಒಳ್ಳೆಯ ಹುಡುಗ ಚಂದ್ರುವಿನಂತಹ ಹುಡುಗನೊಂದಿಗೆ ಸವಾಲು ಹಾಕಿದ್ದು. ನೀತಿ ನಿಜಾಯಿತಿ ಇರುವ ಮನುಷ್ಯ ಮೂರ್ಖರೊಂದಿಗೆ ವಾದ ಮಾಡಿ ತಮ್ಮ ಸಮಯವನ್ನು ಹಾಳು ಮಾಡಿಕೊಳ್ಳುವುದಿಲ್ಲ, ಇದಕ್ಕಿಂತ ದೊಡ್ಡ ತಪ್ಪು ಮತ್ತೊಂದಿಲ್ಲ. ತಾನು ಹಿಡಿದ ಮೊಲಕ್ಕೆ ಮೂರೇ ಕಾಲು ಎಂಬಂತಹ ಚಂದ್ರ ನಿಜವಾದ ಸತ್ಯವನ್ನು ಅರಿವು ಮಾಡಿಕೊಳ್ಳುವುದಿಲ್ಲ.. ಭೂಮಿ ಮತ್ತು ಬಾನು ಎಲ್ಲೂ ಒಂದಾಗುವುದಿಲ್ಲ ಎಂಬ ಸತ್ಯದ ತಲೆಯ ಮೇಲೆ ಹೊಡೆಯುವಂತೆ ಭೂಮಿ ಬಾನುಗಳು ಒಂದಾದಂತೆ ಕಾಣುತ್ತವೆಯಷ್ಟೇ! ಆ ಭ್ರಮೆಯನ್ನೇ ವಾಸ್ತವ ಎಂದು ವಾದಿಸುವ ಚಂದ್ರನಂತಹವರು ಶತಾಯಗತಾಯ ತಾನೇ ಸರಿ ಎಂದು ಹೇಳುತ್ತಾರೆ. ಸುಳ್ಳನ್ನು ಸತ್ಯವೆಂದೇ ನಂಬಿ ಹಾಗೆಯೇ ಹೇಳಿ ವಾದಿಸಿ ಗೆಲ್ಲುತ್ತಾನೆಯೇ ಹೊರತು ನಿಜದಲ್ಲಿ ಅಲ್ಲ. ತಮ್ಮದೇ ಸರಿ ಎಂಬ ಅಹಮ್ಮಿನ ಕೋಟೆಯೊಳಗೆ ಬಂಧಿಯಾದವರು

ಅವರು. ಅಂತಹವರೊಂದಿಗೆ ವಾದ ಮಾಡುವುದರಿಂದ ನಿನ್ನ ಶಕ್ತಿ ಮತ್ತು ಸಮಯ ಎರಡೂ ವ್ಯರ್ಥವಾಗುತ್ತದೆ. ಮೊಂಡುತನ ಮತ್ತು ಅಜ್ಞಾನ ಆರ್ಭಟ ಮಾಡುವಾಗ ಜ್ಞಾನ ಸುಮ್ಮನೆ ಇರಬೇಕು... ಅದುವೇ ನಿಜವಾದ ಜಾಣ್ಮೆ ಎಂದು ಹೇಳಿದಾಗ, ಸೋಮು ಮತ್ತು ಇತರ ಸ್ನೇಹಿತರು ಜಯಣ್ಣನ ಮಾತಿನಲ್ಲಿನ ಸತ್ಯವನ್ನು ಅರಿತು ಹೌದು ಎನ್ನುವಂತೆ ತಲೆ ಆಡಿಸಿದರು.

# ಲಬೊಸಾದಲ್ಲಿ ಒಂದು ದಿನ

ಮುಂದುವರೆದಭಾಗ

ಹಳ್ಳಿಯನ್ನು ನೋಡಲೆಂದು ಹೋದ ನಾವು ಅಚಾನಕ್ ಸಾಂಸ್ಕೃತಿಕ ಮಹತ್ವದ ಜಾಗಕ್ಕೆ ಮುಟ್ಟಿದ್ದೆವು. ನನಗೆ ರಾತ್ರಿ ನಿದ್ದೆಯೇ ಬರಲಿಲ್ಲ. ಬೆಳಗಿನ ಜಾವವೇ ಎದ್ದು ಲಗುಬಗೆಯಿಂದ ಸಾವಿರ ಮೆಟ್ಟಿಲು ಹತ್ತಿ ವಿಹಾರಕ್ಕೆ ಹೋದೆವು. ಬೆಟ್ಟದ ಮೇಲೆ ಮಂಜು ಇನ್ನೂ ಮುಸುಕಿತ್ತು. ಮಂತ್ರೋಕ್ತವಾದ ವರ್ಣರಂಜಿತ ಪತಾಕೆಗಳು ಒದ್ದೆಗೊಂಡು ಅಲುಗದೆ ಸುಮ್ಮನಿದ್ದವು. ಕುನ್ಲೆಯು ಈ ಬೆಟ್ಟವನ್ನು ಮೊಲೆಯಂತೆ ಕಾಣುತ್ತಿದೆಯೆಂದೇ ವಾಸಕ್ಕೆ ಆರಿಸಿಕೊಂಡಿದ್ದನಂತೆ. ವಿಹಾರದಲ್ಲಿ ಹುಲಿಯಂತಹ ನಾಯಿಗಳು ಅಬ್ಬರಿಸಿ ಬಂದವು. ಭಿಕ್ಕುಗಳು ಕರೆಯದಿದ್ದರೆ ನಮ್ಮನ್ನು ಹರಿದು ಹಾಕುತ್ತಿದ್ದವೊ ಏನೊ. ವಿಹಾರದ ಕೆಲಸಗಾರನು ಹೊಗೆಗೂಡಿನಲ್ಲಿ ಪವಿತ್ರಧೂಮ ಎಬ್ಬಿಸಲು ಕಟ್ಟಿಗೆಯ ಚಕ್ಕೆಗಳನ್ನು ತುಂಬುತ್ತಿದ್ದನು. ತುಸುಹೊತ್ತಲ್ಲೇ ಮೇಲಕ್ಕೆದ್ದ ಹೊಗೆ ಮಂಜಿನೊಂದಿಗೆ ಸೇರಿಕೊಂಡು ಆಗಸ ಮತ್ತಷ್ಟು ಬಿಳುಪಾಯಿತು.

ವಿಹಾರದಲ್ಲಿ ಮೌನ ಮತ್ತು ನಿಗೂಢತೆ ನೆಲೆಸಿತ್ತು. ಊರಿನ ಮನೆಗಳ ಗೋಡೆಗಳ ಮೇಲಿರುವಂತೆ ಶಿಶ್ನಚಿಹ್ನೆಗಳೇನು ಕಾಣಲಿಲ್ಲ. ಕೆಳಗೆ ಆಳ ಕಮರಿಯಲ್ಲಿ ಹೊಳೆ ಕಲರವ ಮಾಡುತ್ತ ಹರಿಯುತ್ತಿತ್ತು. ನಾವು ಅತಿಯಾದ ನಿಗೂಢತೆ ಕಲ್ಪಿಸಿಕೊಂಡಿದ್ದೆವು. ಆದರೆ ಅದೊಂದು ಸಾಧಾರಣ ವಿಹಾರ. ಅದಕ್ಕೆ ಲಗತ್ತಾಗಿರುವಂತೆ ಸಾಲಾಗಿ ಕೋಣೆ ಇದ್ದವು. ಬಹುಶಃ ಗಂಡುಹೆಣ್ಣು ಕೂಡುವ ವ್ಯವಸ್ಥೆ ಅಲ್ಲಿರಬಹುದು. ಉಳಿದಂತೆ ಬೇರೆಬೇರೆ ಕೊಠಡಿಗಳಲ್ಲಿ ಭಿಕ್ಕುಗಳು ಬಿಡಾರ ಮಾಡಿದ್ದರು. ಅದೊಂದು ಕಲಿಕಾಕೇಂದ್ರವೂ ಆಗಿತ್ತು. ಎಲ್ಲಿಂದಲೊ ಗೊಣಗೊಣ ಶಬ್ದ ಬರುತ್ತಿತ್ತು. ಬಾಗಿಲಿಗೆ ಅಡ್ಡವಿದ್ದ ಬಣ್ಣದ ಚಿತ್ರಗಳ ಪರದೆಯನ್ನು ಸರಿಸಿ ಒಳಹೋದೆವು. ಒಬ್ಬ ವೃದ್ಧಲಾಮಾ ತಥಾಗತನ ಪ್ರತಿಮೆಯ ಎದುರು, ಕಿಟಕಿ ಬೆಳಕು ಹಸ್ತಪ್ರತಿಗಳ ಮೇಲೆ ಬೀಳುವಂತೆ ಪದ್ಮಾಸನ ಹಾಕಿ ಕೂತು, ಮಂತ್ರ ಪಠಿಸುತ್ತಿದ್ದನು. ಅವನ ಎರಡೂ ಬದಿ ನಿದ್ದೆಯಿನ್ನೂ ತೊಲಗದ ಮಂಕಗವಿದ ಕಂಗಳ ಮಕ್ಕಳು ಕೆಂಪುಶಾಟಿ ಹೊದ್ದು ಗುಡ್ಡೆಯಾಗಿ ಕುಳಿತಿದ್ದವು. ಅಪರಿಚಿತರಾದ ನಮ್ಮನ್ನು ಕಂಡು ಅವುಗಳ ಕಣ್ಣಲ್ಲಿ ವಿಚಿತ್ರ ಹೊಳಪು. ನಾವೂ ಒಂದೆಡೆ ಕೂತು ಧ್ಯಾನ ಮಾಡಿದೆವು. ಧ್ಯಾನದಲ್ಲಿ ಕುನ್ಲೆಯ ಶೃಂಗಾರ ಚಟುವಟಿಕೆಗಳೇ ಕಣ್ಮುಂದೆ ಬಂದು ಚಿತ್ತ ಅಶಾಂತಿಯ ಹೊಳೆ ಯಾಯಿತು. ನಮ್ಮನ್ನೇ ಉದಾಸೀನತೆಯಿಂದ ಆದರೆ ಎಚ್ಚರದಿಂದ ಗಮನಿಸುತ್ತಿದ್ದ ಲಾಮಾ, ಶಿಷ್ಯರಿಗೆ ಸನ್ನೆ ಮಾಡಿದ. ಒಬ್ಬ ಎಳೆಯ ಭಿಕ್ಕು ಬಂದು ನವಿಲುಗರಿ ಸಿಕ್ಕಿಸಿದ ಗಿಂಡಿಯಲ್ಲಿ ಕೊಕ್ಕರೆಕತ್ತಿನಂತೆ ಬಾಗಿದ ಅದರ ತುದಿಯಿಂದ ತೀರ್ಥ ಹಣಿಸಿದನು. ಇನ್ನೊಬ್ಬ ಶಿಷ್ಯನು ಗಜದಂತದಿಂದ ಮಾಡಿದ ಮೊಳದುದ್ದ ಶಿಶ್ನ ತಂದು ಹಣೆಗೆ ಮುಟ್ಟಿಸಿದನು. ಅದು ನಾವು ಹೊರಡಬೇಕೆಂದು ಸೂಚನೆ. ಹೊರಬಂದೆವು.

ಭೂತಾನಿನ ಬಹುತೇಕ ವಿಹಾರಗಳಲ್ಲಿ ಮಂತ್ರಪಠಣೆಗೆ ಯಾಂತ್ರಿಕವಾಗಿ ಕುಳಿತ ಭಿಕ್ಕುಗಳ ಆಕಳಿಸುವ, ನಿದ್ದೆಮಾಡುವ, ಪರಸ್ಪರ ಜಗಳವಾಡುವ, ಪಕ್ಕದವನ ಕಿವಿಗೆ ಚಿಗುಟಿ ಎಚ್ಚರಿಸುವ ಸನ್ನಿವೇಶಗಳಿಗೆ ಸಾಕ್ಷಿಯಾಗಿತ್ತು. ಇದು ಮಕ್ಕಳ ಬಾಲ್ಯವನ್ನು ಕಸಿದುಕೊಂಡು ಒತ್ತಾಯದಿಂದ ಧಾರ್ಮಿಕ ಶಿಕ್ಷಣ ಕೊಡುವ ಎಲ್ಲ ಧಾರ್ಮಿಕ ಶಾಲೆಗಳಲ್ಲಿ ನಡೆವ ವಿದ್ಯಮಾನ. ಸೋನಂ ಬಡವರ ಮಕ್ಕಳೇ ಧರ್ಮಪಾಲನೆಯ ಶಿಕ್ಷಣಕ್ಕೆ ಹೋಗುವುದು ಎಂದು ತಿಳಿಸಿದ. ಭೂತಾನದ ರೈತಾಪಿ ದುಡಿವ ಜನರಲ್ಲಿ ಇರುವ ಮುಗ್ಧತೆ ಪ್ರಾಮಾಣಿಕತೆ ವಿಹಾರದೊಳಗಿನ ಭಿಕ್ಕುಗಳಲ್ಲಿ ಗೋಚರಿಸಲಿಲ್ಲ. ಅವರ ಸಹಜ ಬಾಳನ್ನು ಕಸಿದು ತಾನೇ ಅವರನ್ನು ಸನ್ಯಾಸಕ್ಕೆ ದೂಡಿರುವುದು ಸಮಾಜ ತಾನೇ? ಸನ್ಯಾಸಿಗಳು ಸ್ತ್ರೀಸಂಗ ಮಾಡಿದಾಗ ಲೋಕ ನಿಂದಿಸುತ್ತದೆ. ನಿಸರ್ಗಸಹಜವಲ್ಲದ ಬ್ರಹ್ಮಚರ್ಯವನ್ನು ಅವರ ಮೇಲೆ ಹೇರಿರುವುದರಲ್ಲೇ ದೋಷವಿದೆ ಎಂದು ಆಲೋಚಿಸುವುದಿಲ್ಲ. ಸಂತ ಕುನ್ಲೆ ಅಸಹಜ ಬ್ರಹ್ಮಚರ್ಯದ ವಿರುದ್ಧ ಬಂಡೆದ್ದ ಗುರುವಿನಂತೆ ತೋರಿದನು.

ಕುನ್ಲೆ ತನ್ನ ಜೀವಿತ ಕಾಲದಲ್ಲಿ ಮನೆಮನೆಗೆ ಹೋಗಿ ಮದ್ಯವನ್ನು (ಭೂತಾನಿ ಭಾಷೆಯಲ್ಲಿ 'ಅರ') ಕೇಳಿ ಪಡೆಯುತ್ತಿದ್ದನಂತೆ; ಮನಸ್ಸು ಬಂದರೆ ಆ ಮನೆಯ ಮಹಿಳೆಯರ ಭೋಗವನ್ನೂ ಕೇಳುತ್ತಿದ್ದನಂತೆ; ಜನ ಅದನ್ನು ಹಸಾದವೆಂದು ಸಂತೋಷದಿಂದ ಒಪ್ಪುತ್ತಿದ್ದರಂತೆ. ಕುನ್ಲೆಯ ಕತೆಗಳು ನಮ್ಮ ಜೋಕುಮಾರಸ್ವಾಮಿ ಕತೆಗಳಂತೆ ತೋರಿದವು. ಈತ ತಾಂತ್ರಿಕ ಯೋಗಿಯಾಗಿದ್ದು ಭೂತಾನಿನ ಫಲವಂತಿಕೆಯ ದೈವವಾಗಿ ಮಾರ್ಪಟ್ಟಿದ್ದನೇ? ಸಮಕಾಲೀನ ಬೌದ್ಧಭಿಕ್ಷುಗಳ ಒಣಬೋಧೆಯನ್ನೊ ಅವರ ಬಾಲಸನ್ಯಾಸವನ್ನೊ ಟೀಕಿಸಲು ಹೀಗೆ ಮಾಡಿದನೇ? ಜಗತ್ತಿನ ಅತಿಹೆಚ್ಚು ಜನಸಂಖ್ಯೆ ಇರುವ ಎರಡು ದೇಶಗಳ ನಡುವಣ ಭೂತಾನದ ಜನಸಂಖ್ಯೆ ಎಂಟು ಲಕ್ಷ. ಭೂತಾನಿಗಳು ಬೇಕೆಂದೇ ಸಂತಾನ ಫಲವಂತಿಕೆಯ ಸಂತನನ್ನು ಸೃಷ್ಟಿಸಿಕೊಂಡರೇ? ಪಾಶ್ಚಿಮಾತ್ಯರು ಇಲ್ಲಿನ ಫಲವಂತಿಕೆ ಸಂಪ್ರದಾಯದ ಬಗ್ಗೆ ಪುಸ್ತಕ ಬರೆದಿದ್ದು, ಅದನ್ನು ಅಂಗಡಿಗಳಲ್ಲಿ ಇಡಲಾಗಿತ್ತು. ಟಿಬೆಟಿಯನ್ ಮಹಾಯಾನವು ತಾಂತ್ರಿಕ ಪಂಥ. ಅಲ್ಲಿ ಸಂಭೋಗವು ರೂಪಕವಾಗಿದೆ. ವಜ್ರಯಾನದಲ್ಲಿ ಹೇವಜ್ರ ವಿರೋಚನನು ಹೆಣ್ಣನ್ನು ಎಷ್ಟು ರಭಸದಿಂದ ಕೂಡಿದ್ದಾನೆಂದರೆ ಸ್ತ್ರೀದೇಹವನ್ನು ಮೈಗೆ ಒದ್ದೆಬಟ್ಟೆ ಅಂಟಿಸಿಕೊಂಡಂತೆ ಸಂಲಗ್ನ ಮಾಡಿಕೊಂಡಿರುವನು. ಅಕ್ಕ ಹೇಳುವ 'ಬೆಚ್ಚರೆ ಬೆಸುಗೆ ಅರಿಯದಂತಿರಬೇಕು; ಅಪ್ಪಿದರೆ ಅಸ್ಥಿ ನುಗ್ಗುನುರಿಯಾಗಬೇಕು' ಎಂಬ ಆಲಿಂಗನವದು. ಇಂತಹ ಆಲಿಂಗನದ ಚಿತ್ರಗಳು ಕುಶಾಲನಗರ ಮುಂಡಗೋಡು ವಿಹಾರಗಳಲ್ಲಿ ಕಂಡಿದ್ದು ನೆನಪಾಯಿತು.





**– ರಹಮತ್ ತರೀಕೆರೆ**
**ಲೇಖಕರು, ಸಂಸ್ಕೃತಿ ಚಿಂತಕರು**


ಎಂಟು ಗಂಟೆಯಾಯಿತು. ಬೆಳಗಿನ ಎಳೆಬಿಸಿಲು ಬಲಿಯುತ್ತ ಕಟಾವು ಮುಗಿದ ಗದ್ದೆಗಳನ್ನು ಹೊನ್ನ ಬಯಲಾಗಿಸಿತ್ತು. ನಾವು ಬರುವುದು ತಡವಾಯಿತೆಂದು ಹುಡುಕಿಕೊಂಡು ಬಂದ ಸೋನಂ, ವಿಹಾರದ ಹೊರಗೆ ಕಾಯುತ್ತಿದ್ದನು. ನೀವೇನು ನೋಡಿದಿರಿ ಎಂದು ಆತ ಕೇಳಿದನು. ನಾವು ಧ್ಯಾನಮಾಡಿ ತೀರ್ಥ ಸ್ವೀಕರಿಸಿದ್ದನ್ನು ಹೇಳಿದೆವು. ಆತನೆಂದ: 'ನೀವು ಲಾಮಾರ ವಿಶ್ವಾಸಗಳಿಸಿದ್ದರೆ ನೋಡುವುದು ಬಹಳಿತ್ತು. ಅಲ್ಲಿ ಇರುವ ಆಲ್ಬಂನಲ್ಲಿ ಸಂತಾನಕ್ಕಾಗಿ ಬಂದ ದಂಪತಿಗಳು, ಹರಕೆ ತೀರಿಸಲು ತಮ್ಮ ಮಕ್ಕಳನ್ನು ಎತ್ತಿಕೊಂಡು ಬಂದ ಚಿತ್ರಗಳಿದ್ದವು'. ನಾವು ಸೋನಂನನ್ನು ಬಿಟ್ಟು ಬಂದಿದ್ದಕ್ಕೆ ಪರಿತಪಿಸಿದೆವು. ಬಹುಶಃ ಈ ವಿಹಾರದಲ್ಲಿ ನಿಯೋಗ ಪದ್ಧತಿಯಿದೆ. ಇದು ಎಲ್ಲ ದೇಶಗಳಲ್ಲೂ ಬೇರೆಬೇರೆ ರೂಪದಲ್ಲಿದೆ. ಪಾಂಡುರಾಜನ ಸತಿಯರಾದ ಮಾದ್ರಿ ಕುಂತಿ ಮಕ್ಕಳನ್ನು ಪಡೆದಿದ್ದು ಈ ಪದ್ಧತಿಯಲ್ಲಿ. ಭಾರತದಲ್ಲೂ ಅಲ್ಲಲ್ಲಿ ಈ ಪದ್ಧತಿಯಿದೆಯಂತೆ. ಪೆರುಮಾಳ್ ಮುರುಗನ್ ಇದನ್ನು ಕಾದಂಬರಿ ಬರೆದರು.

ಲಿಂಗಾರಾಧನೆಯ ನಾಡಿನಿಂದ ಹೋದವರಿಗೆ ನಮಗೆ ಲಬೊಸಾದ ಶಿಶ್ನಾರಾಧನೆ ಸೋಜಿಗ ಎನಿಸಲಿಲ್ಲ. ಆದರೆ ಭಾರತದ ಲಿಂಗಾರಾಧನೆ ಪ್ರಕೃತಿ ಪುರುಷಗಳೆರಡೂ ಸಮಾನ ನೆಲೆಯಲ್ಲಿ ಕೂಡಿದ್ದರ ಸಂಕೇತ. ಲಬೋಸಾದ್ದು ಪುರುಷತ್ವದ ಉರವಣಿಗೆ. ಹೆಣ್ಣಾಳಿಕೆಯ ಬುಡಕಟ್ಟು ಸಮಾಜದಿಂದ ಬೌದ್ಧಕ್ಕೆ ಹೊರಳಿದ ಬಳಿಕ ಪುರುಷತ್ವದ ಆರಾಧನೆ ಇಲ್ಲಿ ನೆಲೆಯೂರಿತೇ? ಟಿಬೆಟಿನ ರಾಣಿ ಪದ್ಮಸಂಭವನನ್ನು ಮೆಚ್ಚಿ ಪ್ರೇಮಿಸಿದಳು. ಅವಳನ್ನು ಹುಲಿಯಾಗಿ ಮಾಡಿ ಏರಿಕೊಂಡು ಸಂತನು ಚಲಿಸಿದನು. ಶಕ್ತಿಯ ಚಲನಶೀಲತೆ ಇಲ್ಲದೆ ಪುರುಷತ್ವಕ್ಕೆ ಬೆಲೆಯಿಲ್ಲ ಎಂಬರ್ಥದ ಕತೆಗಳನ್ನು ಶಾಕ್ತ ಹೊಂದಿದೆ. ಆದರೆ ಹೆಣ್ಣನ್ನು ಸವಾರಿ ಮಾಡುವ ಗಂಡುಸುತನ ಮೇಲರಿಮೆಯನ್ನು ಕುನ್ಲೆ ಕತೆ ಸೂಚಿಸುತ್ತಿರಬಹುದು. ಭೂತಾನದ ಒಂದು ಸಣ್ಣ ಹಳ್ಳಿ ನಮಗೆ ಅನಿರೀಕ್ಷಿತವಾಗಿ ಹೊಸ ಅನುಭವಕ್ಕೆ ಹೊಸ ಚಿಂತನೆಗೆ ಪ್ರಚೋದಿಸಿತು. ಅಲ್ಲಿನ ಸಂಸ್ಕೃತಿಯಲ್ಲಿ ಇನ್ನೂ ಏನೆಲ್ಲ ನಿಗೂಢ ಗಳಿವೆಯೊ? ನಮ್ಮ ಪಕ್ಕದ ದೇಶಗಳ ಬಗ್ಗೆ ನಮಗೆ ಗೊತ್ತಿರುವುದಾದರೂ ಎಷ್ಟೊಂದು ಕಡಿಮೆ?



## ಕವಿ ಮನಸು

### ಮೃಗರಾಜನ ಸೆಲ್ಫಿ



ಕಾಡಿನಲ್ಲಿ ಅಂದು ಬಹಳ ಬಿಸಿಲೇರಿತ್ತು
ನೀರಲ್ಲಿ ಮೀಯುವ ಬಯಕೆ ಮನೆಮಾಡಿತ್ತು
ಎಮ್ಮೆ ಕೋಣಗಳು ನೀರಲಿ ಮುಳುಗಿ
ಕಾಡ ಹಕ್ಕಿಗಳು ಹಾಡನು ಗುನುಗಿ

ಮೊಬೈಲು ಸಿಕ್ಕಿತು ಸಿಂಹಕೆ ಅಂದು
ಬಳಗದ ಜೊತೆಗೆ ಸೆಲ್ಫಿಯು ಇಂದು
ಹುಡುಕುತ ಹೊರಟರೆ ಒಬ್ಬರೂ ಸಿಗರು
ಬಿಸಿಲಿನ ಝಳಕೆ ಪಾಪ ಬಳಲಿಹರು

ಕೊಳದ ಬಳಿಗೆ ಸಾಗಲು ಆಗ
ನೀರಲಿ ಪ್ರಾಣಿ ಬಳಗದ ಲಾಗ
ಮೃಗರಾಜನು ಇಳಿದನು ಮೊಬೈಲ್ ಜೊತೆಗೆ
ನಡೆಯಿತು ಈಜುತ್ತ ಪ್ರಾಣಿಗಳ ಮೆರವಣಿಗೆ

ಕೋಣದ ಜೊತೆಗೆ ಸಿಂಹದ ಸೆಲ್ಫಿ
ಮಜವೋ ಮಜಾ ತಿಂದಂತೆ ಕುಲ್ಫಿ
ಕಿಸಿಯುತ ಹಲ್ಲು ಕೊಟ್ಟವು ಲುಕ್ಕು
ಫೋಟೋಗೆ ಸಿಕ್ಕಿತು ಮಿಲಿಯನ್ ಲೈಕು

– ಚೇತನ ಭಾರ್ಗವ ಬೆಂಗಳೂರು

### ಕಂದ ನೋಡು ಗುಡುಗು ಬಂತು



ಮಳೆಗಾಲ ಆರಂಭವಾಯಿತು
ಕಂದ ನೋಡು ಗುಡುಗು ಬಂತು
ಮಳೆಯಿಂದ ಇಳೆಯು ತಂಪಾಯ್ತು
ರೈತನ ಮೊಗದಲ್ಲಿ ಖುಷಿಯು ಕಾಣಿಸಿತು

ಮಿಂಚು ಗುಡುಗಿಗೆ ಹೆದರದಿರು
ಆ ಸಮಯದಿ ಹೊರಗೆ ಹೋಗದಿರು
ಕಪ್ಪು ಮೋಡ ಸುರಿಸಿತು ಮಳೆಯ
ಹಸಿರುಗೊಳಿಸಿತು ಭೂಮಿಯ.

– ಸುವರ್ಣಾ ಭಟ್ಟ

### ಮನಸ್ಸಿಗೆ ಹಿತವಾದ ಆ ಕ್ಷಣ



ಸವಿ ಸಮಯ ಆನಂದಮಯ
ಈ ಮುಂಜಾವೆಷ್ಟು ರಸಮಯ
ಕಣ್ಣು ಸೆಳೆಯುವ ಅರುಣೋದಯ
ಮಂಜಿನ ಮುಸುಕಿನಲ್ಲಿ ಮನಸ್ಸು ತನ್ಮಯ//

ನನ್ನೊಲವಿನ ಜೊತೆಗೂಡಿದ ಪಯಣ
ಮನಸ್ಸಿಗೆ ತುಂಬಾ ಹಿತವೆನಿಸಿದ ಕ್ಷಣ
ಮರೆಯಲಾಗದ ಸಿಹಿ ಸವಿಯ ದಿನ
ಪ್ರೀತಿ ಹೃದಯಕ್ಕದುವೆ ಸಮಾಧಾನ//

ಪ್ರಕ್ರತಿಯಲ್ಲಿ ತುಂಬಿದೆ ಶ್ವೇತ ವರ್ಣ
ಇಳೆಯ ಮುತ್ತಿಕ್ಕಿದೆ ಮಂಜಿನ ಕಣ
ಸೂರ್ಯನು ಸೂಸಿದ ಬೆಳಕ ಕಿರಣ
ಸಾಗುತ್ತ ಹೋಯಿತು ಮಂಜಿನ ದಿಬ್ಬಣ//

ಭುವಿಯಾಯ್ತು ಹಸಿರಿನ ವೈಡೂರ್ಯ
ಗಿಡ–ಮರಗಳೆಲ್ಲ ತೂಗುವ ಸೌಂದರ್ಯ
ಪಕ್ಷಿಗಳ ಸವಿ ಸಂಗೀತದ ಮಾಧುರ್ಯ
ಪ್ರಾರಂಭವಾಯ್ತು ದಿನದ ಕೆಲಸ ಕಾರ್ಯ//

ಈ ಮುಂಜಾನೆಯು ಬದುಕಿಗೆ ಮುನ್ನುಡಿ
ಬೆಳಗುತ್ತಿರಲಿ ನಮ್ಮೆಲ್ಲರ ಸಿಹಿ ನುಡಿ
ಎಲ್ಲಾ ನೋವಿಗೂ ನಗುವೇ ಕೈಪಿಡಿ
ಒಳ್ಳೆತನವೇ ನಮ್ಮ ಬದುಕಿಗೆ ಕನ್ನಡಿ//

**ಸವಿತಾ ಸತೀಶ್ ಶೆಟ್ಟಿ**, ದಕ್ಷಿಣ ಕನ್ನಡ

# ಸುಮ್ಮನೆ ಕುಳಿತವರಿಗೆ ಅನಾರೋಗ್ಯ ಅಧಿಕ ನಿಯಮಿತ ಆರೋಗ್ಯ ತಪಾಸಣೆ ಅತ್ಯಗತ್ಯ

## ನಾನೂ ನಿರಂತರವಾಗಿ ಪ್ರಾಣಾಯಾಮ, ದೈಹಿಕ ಕಸರತ್ತು ಮಾಡುತ್ತೇನೆ: ಸಿ.ಎಂ




**ಹಂಪಿ ಟೈಮ್ಸ್ ಬೆಂಗಳೂರು:**
ದೈಹಿಕವಾಗಿ ಚಟುವಟಿಕೆ ಇಲ್ಲದೆ ಕುಳಿತವರಿಗೆ ಅನಾರೋಗ್ಯ ಹೆಚ್ಚು. ಆದ್ದರಿಂದ ದೈಹಿಕ ಮತ್ತು ಮಾನಸಿಕ ಚಟುವಟಿಕೆ ಅಗತ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಸಚಿವಾಲಯದ ಅಧಿಕಾರಿ ಮತ್ತು ಸಿಬ್ಬಂದಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಮತ್ತು ಚಿಕಿತ್ಸಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಜೀವನಶೈಲಿ ಮತ್ತು ಆಹಾರ ಪದ್ಧತಿ ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ರಾಜ್ಯ ಸರ್ಕಾರ ಎಲ್ಲಾ ಜನ ವರ್ಗಕ್ಕೆ ಆರೋಗ್ಯ ಮತ್ತು ಅಗತ್ಯ ಚಿಕಿತ್ಸೆಗೆ ಒದಗಿಸಲು ಕಾರ್ಯಕ್ರಮಗಳನ್ನು ನಿರಂತರವಾಗಿ ರೂಪಿಸಿ, ಜಾರಿ ಮಾಡುತ್ತಿದ್ದೇವೆ ಎಂದರು.

ಕ್ಯಾನ್ಸರ್ ನಂತಹ ಮಾರಕ ರೋಗವನ್ನೂ ಗುಣಪಡಿಸುವುದು ಸಾಧ್ಯವಿದೆ. ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುತ್ತಿದ್ದರೆ ದೀರ್ಘಕಾಲ ಆರೋಗ್ಯ ಕಾಪಾಡಿಕೊಳ್ಳುವುದು ಸಾಧ್ಯವಿದೆ ಎಂದರು.

ಹಿಂದಿನವರ ಆರೋಗ್ಯ ಪದ್ಧತಿ ಮತ್ತು ಶ್ರಮಾಧಾರಿತ ಜೀವನ ಶೈಲಿ ಅವರನ್ನು ಗಟ್ಟಿಮುಟ್ಟಾಗಿ ಸದೃಡವಾಗಿ ಇಟ್ಟಿತ್ತು ಎಂದರು. ಇಂಥಾ ಆರೋಗ್ಯ ತಪಾಸಣಾ ಶಿಬಿರಗಳು ಮೇಲಿಂದ ಮೇಲೆ ಆಗಬೇಕು. ರಾಜ್ಯದ ಮೂಲೆ ಮೂಲೆಗಳಲ್ಲೂ ನಡೆಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತುಂಬಾ ವಯಸ್ಸಾದ ಮೇಲೆ ಬರುವ ಆರೋಗ್ಯ ಸಮಸ್ಯೆಗಳು ಬರದಂತೆ ವಯಸ್ಸಿದ್ದಾಗಲೇ ಪ್ರಯತ್ನಿಸಿ ಎಂದು ಕರೆ ನೀಡಿದರು.

ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಚ್.ಎಂ.ರೇವಣ್ಣ, ಮುಖ್ಯ ಸಚೇತಕರಾದ ಅಶೋಕ್ ಪಟ್ಟಣ್ , ಅಪರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

### ಸಿಗರೇಟ್ ಬಿಟ್ಟೆ

ಸಹವಾಸ ದೋಷದಿಂದಲೂ ಅನಾರೋಗ್ಯ ತರುವ ಚಟಗಳು ಅಂಟಿಕೊಳ್ಳುತ್ತವೆ. ಆದರೆ ಸದಾ ಎಚ್ಚರದಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕು. ನಾನೂ ಮೊದಲು ಸಿಗರೇಟ್ ಸೇದುತ್ತಿದ್ದೆ. ಒಮ್ಮೆ ವಿದೇಶಕ್ಕೆ ಹೋದಾಗ ಸ್ನೇಹಿತರು ಸಿಗರೇಟ್ ಪ್ಯಾಕ್ ತಂದುಬಿಟ್ಟಿದ್ದರು. ನಾನು ಕಡಿಮೆ ಅವಧಿಯಲ್ಲಿ ಹೆಚ್ಚು ಸಿಗರೇಟ್ ಸೇದಿಬಿಟ್ಟೆ. ಅವತ್ತೇ ನನಗೆ ಮನವರಿಕೆ ಆಯ್ತು. ಮನವರಿಕೆ ಆಗಿದ್ದು ಆಗಸ್ಟ್ 27 ನೇ ತಾರೀಕಿನಂದು. ಅದೇ ದಿನ ಸಿಗರೇಟ್ ಸೇದುವುದನ್ನು ಸಂಪೂರ್ಣ ನಿಲ್ಲಿಸಿದೆ ಎಂದು ನೆನಪಿಸಿಕೊಂಡರು.



**ನೂತನವಾಗಿ ವಿಧಾನ ಪರಿಷತ್ತಿಗೆ ಆಯ್ಕೆಯಾದ ಸದಸ್ಯರು ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಧನ್ಯವಾದ ಅರ್ಪಿಸಿದರು. ಮುಖ್ಯಮಂತ್ರಿಗಳು ಎಲ್ಲಾ ಏಳು ಮಂದಿ ಸದಸ್ಯರಿಗೆ ಶುಭ ಹಾರೈಸಿ ಸದನದ ಕಲಾಪಗಳಲ್ಲಿ ಪೂರ್ತಿಯಾಗಿ ಭಾಗವಹಿಸಿ ಸಕ್ರಿಯವಾಗಿ ಪಾಲ್ಗೊಳ್ಳಿ ಎಂದರು.**

# ಎಲ್ಲಿ ಮಾಯವಾಗಿದೆ ಇಂದು ವನಸಿರಿ!?

ಎತ್ತೆತ್ತಲು ನೋಡಿದರೂ ಹಸಿರು ಸಿರಿ, ಮರ ಗಿಡ ಬಳ್ಳಿಗಳಿಂದಾವೃತ ಕಾಡು, ಹಚ್ಚ ಹಸಿರಿನ ನೋಟ,ನಡುವೆ ಹೂ ದುಂಬಿಗಳ ಒಡನಾಟ. ಸ್ವಚ್ಛಂದವಾಗಿ ಓಡಾಡುವ ಜಿಂಕೆ ಚಿಗರೆಗಳ ಕೂಟ, ಭೂಲೋಕದ ಕಾಡುಗಳದು ಹೊಂದಿದೆ ಬಲು ವಿಹಂಗಮದ ನೋಟ.

ಎತ್ತೆತ್ತರದ ಗುಡ್ಡಬೆಟ್ಟಗಳು,ಗಗನಚುಂಬಿಸುವ ವೃಕ್ಷ ರಾಶಿಗಳು, ಚಿಲಿಪಿಲಿ ಗುಟ್ಟುವ ಹಕ್ಕಿಪಿಕ್ಕಿಗಳು, ಮೇಲಿಂದ ದುಮ್ಮಿಕ್ಕುವ ಜಲಪಾತದ ದೃಶ್ಯ ವೈಭವಗಳು, ಸಾವಿರಾರು ಪ್ರಾಣಿ ಪಕ್ಷಿಗಳ ಆವಾಸಸ್ಥಾನವು, ಜೀವಸಂಕುಲಕ್ಕೆ ಕಾಡೇ ಆಧಾರವು. ಓಡುವ ಮೋಡಗಳ ತಡೆದು, ಮಳೆ ತರುವ ಜೀವಾದಾತೆಯು, ನಮ್ಮ ಈ ಪ್ರಕೃತಿ ಮಾತೆಯು. ಭೋರ್ಗರೆದು ಹರಿಯುವ ನದಿ, ಹೊಳೆ, ಹಳ್ಳಕೊಳ್ಳಗಳು, ಯಾವ ಶಿಲ್ಪಿ ಕೆತ್ತನೆಯೋ ತಿಳಿಯದ ಕೊರೆದ ಕಲ್ಲು ಬಂಡೆಗಳು. ಇಷ್ಟೆಲ್ಲಾ ಸುಂದರವರ್ಣನೆಯ ವನಸಿರಿ ಇಂದು ಕೃತಕ ಸಾಧನಗಳ ಮುಂದೆ, ಕಟ್ಟಡಗಳ ಮುಂದೆ, ಮಾನವನ ಅತಿಯಾಸೆಗೆ, ತನ್ನತನವನ್ನು ಕಳೆದು ಕೊಂಡು ಗಾಯಗೊಂಡಂತೆ ಕಾಣಿಸುತ್ತಾಳೆ.

ಒಂದೆಡೆ ಕೃಷಿ ಬಳಕೆಗಾಗಿ ಕಿಲೋಮೀಟರ್ಗಟ್ಟಲೆ ವನಸಿರಿ ನಾಶವಾಗಿ, ತೋಟಗದ್ದೆಗಳಾಗಿ ಬಿಡುತ್ತಿವೆ. ಅತಿಯಾಸೆ ಮಿತಿಮೀರಿ ಇಂದು ಗದ್ದೆ ತೋಟಗಳೂ ಕೂಡಾ ಲೇಔಟ್ಗಳಾಗಿ ಹೊರಹೊಮ್ಮುತ್ತಿದೆ.

ಸಾಗರದ ತಟ, ನದಿಯ ದಡ, ಬೆಟ್ಟ ಗುಡ್ಡದ ಒಳಗೂ ತನ್ನ ಹಸ್ತವನ್ನು ಚಾಚಿ ಮಾನವ ಪ್ರಕೃತಿಯ ಸೌಂದರ್ಯವನ್ನು ಕೆಡಿಸಿಬಿಟ್ಟಿದ್ದಾನೆ. ಇಂದು ನದಿ ತಟ, ಸಮುದ್ರಗಳ ಕಿನಾರೆಗಳೆಲ್ಲ ತ್ಯಾಜ್ಯ ಸುರಿಯುವ ಸ್ಥಳಗಳಾಗಿವೆ. ಕಾರ್ಖಾನೆಗಳು ಹೊರ ಚೆಲ್ಲುವ ವಿಷ ವಸ್ತುಗಳ ಆಗರವಾಗಿದೆ. ಆಧುನಿಕತೆ, ಸೌಕರ್ಯಗಳ ಹೆಸರಿನಲ್ಲಿ ರಸ್ತೆ ಬದಿಯ ಹಚ್ಚ ಹಸಿರು ಹೊದ್ದ ಭಾರಿ ಗಾತ್ರದ ಗಿಡಮರಗಳು ವಿದ್ಯುತ್ ಚಾಲಿತ ಯಂತ್ರೋಪಕರಣಗಳ ಸಹಾಯದಿಂದ ಚಕಚಕನೆ ಉರುಳಿ ನೆಲಕ್ಕೆ ಬಿದ್ದು, ಒಣಗಿ ಬೋಳಾಗಿ ರೋಧಿಸುವಂತೆ ಕಾಣಿಸುತ್ತಿದೆ.

ಇದೆಲ್ಲಾ ನೋಡುವಾಗ ಸಹೃದಯರ ಒಡಲಾಳದ ಒಳಗೆ ಹೇಳಲಾರದ ಸಂಕಟ ಉಂಟಾಗುತ್ತದೆ.ಆದರೆ ಕೆಲವೊಂದು ವಿಚಾರಗಳಲ್ಲಿ ಅಸಹಾಯಕರಾಗುವ ಪರಿಸ್ಥಿತಿ ಉಂಟಾಗಿದೆ. ಇದಕ್ಕೆಲ್ಲಾ ಪರಿಹಾರಾರ್ಥವಾಗಿ ಏಕವ್ಯಕ್ತಿಯಿಂದ ದೊಡ್ಡ ಬದಲಾವಣೆ ಒಮ್ಮೆಲೆ ಅಸಾಧ್ಯವಾದರೂ, ಆದಷ್ಟು ಪ್ರತಿಯೊಬ್ಬರೂ ಗಿಡಮರಗಳನ್ನು ನೆಟ್ಟು ಪೋಷಿಸಿ, ಸುತ್ತ ಹಚ್ಚ ಹಸಿರಾಗಿರುವಂತೆ ನೋಡಿಕೊಳ್ಳುವ ಹಾಗಾದರೆ ಚೆನ್ನ. ಆದಷ್ಟು ಗಿಡಮರಗಳನ್ನು ಕಡಿಯಲು ಬಿಡದೇ ಪ್ರತಿಭಟಿಸುವುದು ಒಳಿತು. ಮನೆಯ ಸುತ್ತ ಮಣ್ಣು ಬಾರದಂತೆ ಕಾಂಕ್ರೀಟ್ ಮೆತ್ತದೆ,ನೆಲದೊಳಗೆ ನೀರಿಂಗಿ ಹೋಗಲು ವ್ಯವಸ್ಥೆ ಮಾಡಿ, ಮನೆ ಸುತ್ತ ಮತ್ತಷ್ಟು ಕಟ್ಟಡವನ್ನೇ ಕಟ್ಟದೆ, ಒಂದಷ್ಟು ಸ್ಥಳಾವಕಾಶವನ್ನು ಖಾಲಿ ಬಿಟ್ಟುಕೊಂಡು ಗಿಡಮರಗಳಿಗಾಗಿ ತುಸು ಜಾಗವನ್ನು ಉಳಿಸಿಕೊಳ್ಳುವುದು ಸೂಕ್ತ.ಇಂತಹ ಸಣ್ಣಪುಟ್ಟ ಬದಲಾವಣೆಗಳು ಪ್ರತಿಯೊಬ್ಬನಿಂದಲೂ ನಡೆದಾಗ, ಸಹಜವಾಗಿ ನಗರದ ನಡುವೆಯೂ ಹಚ್ಚಹಸಿರಿನ ವನಸಿರಿ ಗೋಚರವಾಗುವುದರಲ್ಲಿ ಸಂಶಯವಿಲ್ಲ.ಆದರೆ ಮಾನವನಿಗೆ ಎಲ್ಲವನ್ನೂ ಮಾಡುವ ಇಚ್ಛೆ, ಮನೋಬಲ ಹುಟ್ಟುವುದೇ ಕಷ್ಟವಾಗಿದೆ ಅಲ್ಲವೇ?!!

**– ಮಮತಾ ಶೃಂಗೇರಿ**

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**07–06–2024 – ಶುಕ್ರವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೃಗಶಿರ |
| ಯೋಗ | : ಶೂಲ |
| ಕರಣ | : ಭವ |
| ಸೂರ್ಯೋದಯ | : 05:41:46 |
| ಸೂರ್ಯಾಸ್ತ | : 19:10:10 |
| ರಾಹು | : 10:45–12:26 |
| ಯಮಘಂಡ | : 15:48–17:29 |
| ಗುಳಿಕ | : 07:23–09:04 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 06–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.14 ಅಡಿ |
| ಒಳ ಹರಿವು | 1581 ಕ್ಯುಸೆಕ್ |
| ಹೊರ ಹರಿವು | 10 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.631 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1581.10 ಅಡಿ |
| ಒಳ ಹರಿವು | 723 ಕ್ಯುಸೆಕ್ |
| ಹೊರ ಹರಿವು | 251 ಕ್ಯುಸೆಕ್ |
| ಸಾಮರ್ಥ್ಯ | 5.029 ಟಿಎಂಸಿ |

## ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣದ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಖಾಲಿ ಇರುವ ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಕೆ. ಹೆಚ್.ಸತೀಶ್ ಅವರು ತಿಳಿಸಿದ್ದಾರೆ.

ಕನ್ನಡ ವಿಷಯ–8, ಇಂಗ್ಲೀಷ್ ವಿಷಯ–7, ಹಿಂದಿ–5, ಗಣಿತ–9, ವಿಜ್ಞಾನ–7, ಸಮಾಜ ವಿಜ್ಞಾನ–2, ದೈಹಿಕ ಶಿಕ್ಷಕರು–7, ಗಣಕಯಂತ್ರ ಶಿಕ್ಷಕರು–7, ಒಟ್ಟು 52 ಅತಿಥಿ ಶಿಕ್ಷಕರ ಹುದ್ದೆಗಳಿಗೆ ಗೌರವಧನದ ಆಧಾರದ ಮೇಲೆ (B.A., B.ED., B.SC, B.ED, TET, BPED, BCA) ಬಿ.ಎ, ಬಿ.ಇಡಿ., ಬಿ.ಎಸ್‌ಸಿ ಬಿ.ಇಡಿ., ಟಿ.ಇ.ಟಿ., ಬಿ.ಪಿ.ಇಡಿ, ಬಿ.ಎಸ್.ಸಿ ಕಂಪ್ಯೂಟರ್, ಬಿ.ಸಿ.ಎ ಅರ್ಹತೆ ಹೊಂದಿರುವ ಶಿಕ್ಷಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ಅಭ್ಯರ್ಥಿಗಳು ಜೂ.15 ರೊಳಗಾಗಿ ನಗರದ ವಾಲ್ಮೀಕಿ ಭವನದ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.7760167576, 9844969858, 8310558003, 9886297280 ಗೆ ಸಂಪರ್ಕಿಸಬಹುದು.

## ರಂಗಶಿಕ್ಷಣ (ಡಿಪ್ಲೋಮಾ) ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ:**

ಕರ್ನಾಟಕ ಸರ್ಕಾರದಿಂದ ಮೈಸೂರಿನಲ್ಲಿ ಸ್ಥಾಪಿತವಾಗಿರುವ ರಂಗಾಯಣದಿಂದ 2024–25ನೇ ಸಾಲಿನ ಹತ್ತು ತಿಂಗಳ ರಂಗಶಿಕ್ಷಣ (ಡಿಪ್ಲೋಮಾ) ತರಬೇತಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ರಂಗ ತರಬೇತಿ ಕೋರ್ಸ್‌ಗೆ ಸೇರಲು ಇಚ್ಚಿಸುವ ವಿದ್ಯಾರ್ಥಿಗಳು ರಂಗಭೂಮಿಯ ಪ್ರಾಥಮಿಕ ಅನುಭವ ಹೊಂದಿರಬೇಕು. ಕನಿಷ್ಠ ದ್ವಿತೀಯ ಪಿಯುಸಿ (10+2) ಅಥವಾ ತತ್ಸಮಾನ ಪರೀಕ್ಷೆ ತೇರ್ಗಡೆ ಹೊಂದಿರಬೇಕು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ನಿಯಮಾನುಸಾರ ರಂಗಾಯಣದಿಂದಲೇ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು ಮತ್ತು ಮಾಹೆಯಾನ 5,000 ರೂ.ಗಳ ವಿದ್ಯಾರ್ಥಿ ವೇತನ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ http://rangayanamysore.karnataka.gov.in / ಮೊ.ಸಂ: 9148827720 ಗೆ ಸಂಪರ್ಕಿಸಬಹುದು.

# ಮಳೆಗೆ ಭರ್ತಿಯಾದ ಹಳ್ಳಕೊಳ್ಳ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನಲ್ಲಿ ಕಳೆದೆರಡು ದಿನಗಳು ಸುರಿದ ಮಳೆಗೂ ಮತ್ತು ಬುಧವಾರ ಸಂಜೆ ಸುರಿದ ಮಳೆಯಿಂದ ಅಲ್ಲಲ್ಲಿ ಹಳ್ಳಕೊಳ್ಳಗಳು ತುಂಬಿ ಹರಿದಿದ್ದು ಕಂಡುಬಂದಿತು.

ಸೋಮವಾರ ರಾತ್ರಿ ಸುರಿದ ಮಳೆಗೆ ತಾಲೂಕಿನ ಮೋರಗೆರೆ, ಮಾಲವಿ, ನೆಲ್ಲುಕುದುರಿ, ಬೆಣಕಲ್ಲು, ಹನಸಿ ಸೇರಿದಂತೆ ಅನೇಕ ಕಡೆ ಹಗರಿಹಳ್ಳಗಳು ಹರಿದವು, ಬೆಣಕಲ್ಲು ಕೆರೆಯತ್ತ ನೀರು ಹರಿದುಬಂದಿದ್ದು ಕಂಡ ಆ ಭಾಗದ ರೈತರು ಹರ್ಷ ವ್ಯಕ್ತಪಡಿಸದರು. ಅದರಂತೆ ಮಂಗಳವಾರ ಮೋಡಮುಸುಕಿನ ವಾತಾವರಣ ಕಂಡುಬಂದರೂ ಮಳೆ ಬರಲಿಲ್ಲ. ಆದರೆ, ಬುಧವಾರ ಸಂಜೆ 5ಗಂಟೆಗೆ ಸುರಿದ ಮಳೆಯಿಂದ ಮರಬ್ಬಿಹಾಳ್, ಮಗಿಮಾವಿನಹಳ್ಳಿ, ಹಂಪಾಪಟ್ಟಣ, ಹಂಪಸಾಗರ, ತಂಬ್ರಹಳ್ಳಿಗಳಲ್ಲಿ ಅತ್ಯುತ್ತಮ ಮಳೆಯಾಗಿದೆ. ಅಲ್ಲದೆ, ಹಂಪಾಪಟ್ಟಣ ಕೆರೆಯತ್ತ ನೀರು ಹರಿದು ಬಂದಿತು. ರಾಯರಾಳು ತಾಂಡದ ನೂತನ ಚಿಕ್ಕ ಡ್ಯಾಂಗಳು ಸಂಪೂರ್ಣ ತುಂಬಿ ಹರಿಯಿತು. ಈ ಭಾಗ ಸಾರ್ವಜನಿಕರು ಮುಂಗಾರು ಮಳೆಯಿಂದ ಹರ್ಷಿತರಾದರು.



ಜೂನ್ 5ರ ಬುಧವಾರ ಪರಿಸರ ದಿನಾಚರಣೆ ಹಿನ್ನೆಲೆಯಲ್ಲಿ ತಾಲೂಕು ಆಡಳಿತ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ತಾಲೂಕು ಆಡಳಿತ ಸೌಧದಬಳಿ ತಹಸೀಲ್ದಾರ್ ಚಂದ್ರಶೇಖರ್, ಅರಣ್ಯ ಅಧಿಕಾರಿ ಕರಿಬಸಪ್ಪ ಹಾಗೂ ಇಲಾಖೆಗಳ ಸಿಬ್ಬಂದಿ ಸಸಿಗಳನ್ನು ನೆಟ್ಟು ನೀರುಣಿಸಿದರು.

ಮಗಿಮಾವಿನಹಳ್ಳಿ ಗ್ರಾ.ಪಂ.ವ್ಯಾಪ್ತಿಯ ಅಮೃತ್ ಸರೋವರ ಎನ್ನುವ ಚೆಕ್‌ಡ್ಯಾಂ ತುಂಬಿ ಹರಿದಿತ್ತು. ಇದಕ್ಕೂ ಮೊದಲು ಇದರ ಪಕ್ಕದಲ್ಲಿಯೇ ತಾ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರಮೇಶ್ವರಪ್ಪ, ಉದ್ಯೋಗ ಖಾತ್ರಿ ಯೋಜನೆಯ ತಾಲೂಕು ಸಹಾಯಕ ನಿರ್ದೇಶಕ ರಮೇಶ ಮಹಾಲಿಂಗಪುರ ಮತ್ತು ಗ್ರಾ.ಪಂ.ಅಧ್ಯಕ್ಷರು ಎಚ್.ಲಕ್ಷ್ಮಿದೇವಿ, ಉಪಾಧ್ಯಕ್ಷೆ ಪಿ.ಗಂಗಮ್ಮ, ಸರ್ವ ಸದಸ್ಯರನ್ನೊಳಗೊಂಡು, ಪಿಡಿಓ ರತ್ನಮ್ಮ ಹಾಗೂ ಕಾರ್ಯದರ್ಶಿ ಅಬ್ದುಲ್ ಕಲಾಂ ಸೇರಿ ಪರಿಸರ ದಿನಾಚರಣೆ ಆಚರಿಸಿದರು.

ತಾಲೂಕಿನಲ್ಲಿ ಸುರಿದ ಮಳೆಯ ವರದಿ ತಂಬ್ರಹಳ್ಳಿ 7.2ಮಿ.ಮೀ, ಮಾಲವಿ 3.4ಮಿ.ಮೀ, ಹಂಪಸಾಗರ 1.2ಮಿ.ಮೀ, ಹಗರಿಬೊಮ್ಮನಹಳ್ಳಿ 1.6ಮಿ.ಮೀ ಒಟ್ಟು 13.4ಮಿ.ಮೀನಷ್ಟು ಮಳೆಯಾಗಿದೆ.

# ನರೇಂದ್ರ ಮೋದಿ ಜನಪ್ರಿಯತೆ ಕುಗ್ಗಿದೆ


## ವಿಜಯನಗರ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಶಿರಾಜ್‌ಶೇಖ್ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ದೇಶದಲ್ಲಿ ನರೇಂದ್ರ ಮೋದಿಯವರ ಪ್ರಭಾವ ಹಾಗೂ ಜನಪ್ರಿಯತೆ ಕುಗ್ಗಿದೆ. ಲೋಕಸಭಾ ಚುನಾವಣೆಯಲ್ಲಿ ವರಣಾಸಿಯಲ್ಲಿ ನಾಲ್ಕುವರೆ ಲಕ್ಷಕ್ಕೂ ಅಧಿಕ ಮತಗಳಿಂದ ಗೆಲುವು ಸಾಧಿಸಿದ್ದರು. ಆದರೆ ಈಬಾರಿ ಒಂದು ಲಕ್ಷ ಐವತ್ತು ಸಾವಿರ ಮತಗಳಿಂದ ಗೆದ್ದಿರುವದೇ ಸಾಕ್ಷಿ. ಜನರು ಮೋದಿಯವರನ್ನು ತಿರಸ್ಕರಿಸುತ್ತಿದ್ದಾರೆ ಎಂದು ವಿಜಯನಗರ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಶಿರಾಜ್‌ಶೇಖ್ ಹೇಳಿದರು.

ವಿಜಯನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ನಗರದ ಕೊಂಡನಾಯಕನ ಹಳ್ಳಿ ಜಿಲ್ಲಾ ಕಚೇರಿಯಲ್ಲಿ ಬಳ್ಳಾರಿ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ ತುಕಾರಾಮ ರವರ ಗೆಲುವಿಗಾಗಿ ವಿಜಯನಗರ ಜಿಲ್ಲೆಯಾದ್ಯಂತ ಶ್ರಮಿಸಿದ ಜಿಲ್ಲಾಧ್ಯಕ್ಷ ಸಿರಾಜ್ ಶೇಖ್ ರವರಿಗೆ ಹಾಗೂ ಜಿಲ್ಲಾ ಪದಾಧಿಕಾರಿಗಳಿಗೆ, ಕಾರ್ಯಕರ್ತರಿಗೆ , ಮುಖಂಡರಿಗೆ ಸನ್ಮಾನ ಕಾರ್ಯಕ್ರಮ ನಂತರ ಮಾತನಾಡಿದ ಅವರು, 2024ರ ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿ ಕ್ಷೇತ್ರವು ಕಾಂಗ್ರೆಸ್ ಪಕ್ಷದ ಭದ್ರಕೋಟೆ ಎಂದು ಮತ್ತೊಮ್ಮೆ ಸಾಬೀತಾಗಿದೆ. ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರು ಒಗ್ಗಟ್ಟಿನ ಪ್ರಯತ್ನದ ಫಲದಿಂದ ಈ ಅಭೂತಪೂರ್ವ್ ಗೆಲುವು ಸಾಧ್ಯವಾಗಿದೆ. ಹಾಗೆಯೇ ಕಾಂಗ್ರೆಸ್ ಪಕ್ಷ ಬಳ್ಳಾರಿ ಲೋಕಸಭಾ ಕ್ಷೇತ್ರಕ್ಕೆ ಉತ್ತಮ ಅಭ್ಯರ್ಥಿಯನ್ನು ಕೊಟ್ಟಿರುವುದು ಸಹ ಗೆಲುವಿಗೆ ಕಾರಣ ಎಂದರು.

ಕಳೆದ ಚುನಾವಣೆಗಿಂತ ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವೋಟಿಂಗ್ ಶೇ.9 ರಷ್ಟು ಹೆಚ್ಚಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿಗೆ ಇರುವ ವ್ಯತ್ಯಾಸ 0.5 ರಷ್ಟು ಮಾತ್ರ ಇದ್ದರೂ ನಮ್ಮ ನಿರೀಕ್ಷೆಯಂತೆ ಕಾಂಗ್ರೆಸ್ ಪಕ್ಷದಿಂದ ಲೋಕಸಭಾ ಸದಸ್ಯರು ಕಡಿಮೆ ಆಯ್ಕೆಯಾಗಿದ್ದಾರೆ. ಆದರೂ ಉತ್ತಮ ಫಲಿತಾಂಶ ಬಂದಿದೆ. ಮುಂಬರುವ ದಿನಗಳಲ್ಲಿ ಉತ್ತಮ ಕೆಲಸ ಮಾಡುವ ಮೂಲಕ ಮತದಾರರ ಋಣವನ್ನು ತೀರಿಸುತ್ತೇವೆ. ಈ ಗೆಲುವಿಗೆ ಕಾರಣವಾದ ಎಲ್ಲರಿಗೂ ಅಭಿನಂದಿಸುತ್ತೇನೆ ಎಂದರು.



**ವಿಜಯನಗರ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆ : ವರಿಷ್ಠರ ಗಮನಕ್ಕೆ**

ವಿಜಯನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಲೀಡ್ ಬರದಿರುವುದಕ್ಕೆ ನಾನಾ ಕಾರಣಗಳಿವೆ. ಸ್ಥಳೀಯ ಶಾಸಕರು ಸಕ್ರಿಯವಾಗಿ ಸ್ಪಂದನೆ ಮಾಡುತ್ತಿಲ್ಲ ಎಂಬ ಆರೋಪವಿದೆ. ಇದನ್ನು ವರಿಷ್ಠರ ಗಮನಕ್ಕೆ ತರಲಾಗುವುದು. ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸಿಕೊಂಡು ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವಿನ ಬಗ್ಗೆ ಹೆಚ್ಚು ಒತ್ತು ನೀಡಲಾಗುವುದು. ಇಲ್ಲಿಯವರೆಗೆ ಮುಖಂಡರ ಚುನಾವಣೆಗಳನ್ನು ಕಾರ್ಯಕರ್ತರು ಮಾಡಿದ್ದಾರೆ. ಈಗ ಕಾರ್ಯಕರ್ತರು ಚುನಾವಣೆ ಗಳನ್ನು ಮುಖಂಡರು ಸೇರಿ ಮಾಡಬೇಕಾಗಿದೆ. ಇದಕ್ಕಾಗಿ ಪಕ್ಷದ ಸಂಘಟನೆ ಕಾರ್ಯ ನಡೆಯಲಿದೆ ಎಂದರು.

ಲೋಕಸಭಾ ಸದಸ್ಯರಾಗಿ ನೂತನವಾಗಿ ಆಯ್ಕೆಯಾಗಿರುವ ಈ ತುಕಾರಾಮ್ ರವರ ಸಂಡೂರಿನ ನಿವಾಸಕ್ಕೆ ತೆರಳಿ ಜಿಲ್ಲಾಧ್ಯಕ್ಷ ಸಿರಾಜ್‌ಶೇಖ್ ಅವ ರೊಂದಿಗೆ ಕಾಂಗ್ರೆಸ್ ಪಕ್ಷದ ಮುಖಂಡರು ತೆರಳಿದ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಕೆ.ಎಂ. ಹಾಲಪ್ಪ, ಪ್ರಧಾನ ಕಾರ್ಯದರ್ಶಿ ನಿಂಬಗಲ್ ರಾಮಕೃಷ್ಣ, ಜಿಲ್ಲಾ ಉಪಾಧ್ಯಕ್ಷ ಕೆ.ರಮೇಶ, ಜಿಲ್ಲಾ ಪ್ರಧಾನ ಕಾರ್ಯ ದರ್ಶಿ ಅನಂತ್ ಪದ್ಮನಾಭ, ಜಿಲ್ಲಾ ಸೇವಾದಳ ಜಿಲ್ಲಾ ಸಂಘಟಕ ಬಾ.ಮಾರೆಣ್ಣ, ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ತಮ್ಮನ್ನಳಪ್ಪ, ಪರಿಶಿಷ್ಟ ಜಾತಿ ವಿಭಾ ಗದ ಜಿಲ್ಲಾಧ್ಯಕ್ಷ ಬಣ್ಣದ ಮನೆ ಸೋಮಶೇಖರ್, ಜಿಲ್ಲಾ ಕಾನೂನು ಹಾಗೂ ಮಾಹಿ ತಿ ಹಕ್ಕು ವಿಭಾಗದ ಜಿಲ್ಲಾಧ್ಯಕ್ಷ ಹೆಚ್.ಮಹೇಶ್ , ಜಿಲ್ಲಾ ಕಾರ್ಯದರ್ಶಿಗಳಾದ ಕೊ ಟಗಿನಾಳ ಮಲ್ಲಿಕಾರ್ಜುನ, ಸಂಗಪ್ಪ, ಯರ್ರಿಸ್ವಾಮಿ, ಜಿಲ್ಲಾ ಸಂಘಟನಾ ಕಾರ್ಯ ದರ್ಶಿ ಮರಡಿ ಮಂಜುನಾಥ , ಹೊಸಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿನಾಯಕ ಶೆಟ್ಟರ್, ಕಮಲಾಪುರ ಬ್ಲಾಕ್ ಅಧ್ಯಕ್ಷ ಸಿ. ಖಾಜಾ ಹುಸೇನ್, ಹಿಂದುಳಿದ ವರ್ಗಗ ಳ ವಿಭಾಗದ ಹೊಸಪೇಟೆ ಬ್ಲಾಕ್ ಅಧ್ಯಕ್ಷ ಬಾಣದ ಗಣೇಶ, ಪರಿಶಿಷ್ಟ ಜಾತಿ ವಿಭಾ ಗದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ.ಶಿವಕುಮಾರ, ಪರಿಶಿಷ್ಟ ಜಾತಿ ವಿಭಾಗದ ಕಮಲಾಪುರ ಬ್ಲಾಕ್ ಅಧ್ಯಕ್ಷ ದೇವರಮನೆ ಕನ್ನೇಶ್ವರ, ಅಸಂಘಟಿತ ಕಾರ್ಮಿಕ ವಿ ಭಾಗದ ಅಧ್ಯಕ್ಷ ಚಾಂದ್, ಸೇವಾದಳ ತಾಲ್ಲೂಕು ಅಧ್ಯಕ್ಷ ತಾಯಪ್ಪ, ಧನ್ ರಾಜ್, ಗೋಪಾಲಕೃಷ್ಣ, ಸಣ್ಣ ಮಾರೆಪ್ಪ, ತಾರಾ ಭಾಷ, ಪೀರಾ ಸಾಬ್, ಖಾಜಾ ಹುಸೇನ್, ಪರಶುರಾಮ, ನಾಗರಾಜ್, ಶೇಖರ್ ಸಣ್ಣ ಈರಣ್ಣ, ಮತ್ತಿತರರು ಇದ್ದರು.

# ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆ ಅಚ್ಚುಕಟ್ಟಾಗಿ ನಡೆಸಿ: ಎಡಿಸಿ ಅನುರಾಧ

**ಹಂಪಿ ಟೈಮ್ಸ್ ಹೊಸಪೇಟೆ**

2024ನೇ ಸಾಲಿನ ಪ್ರಥಮ ಅಧಿವೇಶನ ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿ ಮಾರ್ಗಸೂಚಿನುಸಾರ ಕಾರ್ಯ ನಿರ್ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಅವರು ತಿಳಿಸಿದರು.

ಜೂನ್ 6ರಂದು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ ಅವರು ಮಾತನಾಡಿದರು. ಜೂನ್ 07 ರಿಂದ ಜೂನ್ 09ರವರೆಗೆ ನಡೆಯಲಿರುವ 2024ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷಾ ಕೇಂದ್ರಕ್ಕೆ ಅವಶ್ಯಕತೆಗೆ ಅನುಗುಣವಾಗಿ ಪೊಲೀಸ್ ಬಂದೋಬಸ್ತ್ ಒದಗಿಸಬೇಕು. ಜಿಲ್ಲಾ ಖಜಾನೆಯಲ್ಲಿ ಪರೀಕ್ಷಾ ಪ್ರಶ್ನೆಪತ್ರಿಕೆ ಸಂರಕ್ಷಣೆಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ವಹಿಸಬೇಕು. ಪ್ರಶ್ನೆ ಪತ್ರಿಕೆಗಳ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವಂತಹ ವ್ಯಕ್ತಿಗಳ ವಿರುದ್ಧ ಅಗತ್ಯ ಮುಂಜಾಗೃತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಪರೀಕ್ಷಾ ಕೇಂದ್ರಕ್ಕೆ ಪ್ರಥಮ ಚಿಕಿತ್ಸಾ ಪೆಟ್ಟಿಗೆಯೊಂದಿಗೆ ಆರೋಗ್ಯ ಇಲಾಖೆಯ ಇಬ್ಬರು ಅರೆ ವೈದ್ಯಕೀಯ ಸಿಬ್ಬಂದಿಯನ್ನು ಪರೀಕ್ಷೆ ಪ್ರಾರಂಭವಾಗುವ 02 ಗಂಟೆ ಮುಂಚಿತವಾಗಿ ಹಾಜರಿರಿಸಿ ಅಭ್ಯರ್ಥಿಗಳ ತಪಾಸಣೆ ನಡೆಸಿ, ಪರೀಕ್ಷೆ ಮುಗಿಯುವವರೆಗೆ ಕಾರ್ಯನಿರ್ವಹಸುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸಂಬಂಧಿಸಿದ ವಿವಿಧ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಪರೀಕ್ಷಾ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷಿತವಾಗಿ ಪರೀಕ್ಷಾ ಕೇಂದ್ರಕ್ಕೆ ತಲುಪಿಸುವ ಸಂಬಂಧ ಮಾರ್ಗಾಧಿಕಾರಿಗಳು ಹಾಗೂ ಸ್ಥಳೀಯ ನಿರೀಕ್ಷಣಾಧಿಕಾರಿಗಳನ್ನು ಈಗಾಗಲೇ ನೇಮಿಸಲಾಗಿದೆ. ಈ ಅಧಿಕಾರಿಗಳು ಪರೀಕ್ಷಾ ಗೌಪ್ಯ ವಸ್ತುಗಳನ್ನು ಖಜಾನೆಯಿಂದ ನಿಗದಿಪಡಿಸಲಾದ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ವೇಳಾ ಪಟ್ಟಿಯಂತೆ ವಿತರಿಸಲು ಅಗತ್ಯ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.


ವಿಡಿಯೋ ಸಂವಾದದಲ್ಲಿ ಖಜಾನೆಯ ಇಲಾಖೆಯ ಉಪ ನಿರ್ದೇಶಕರಾದ ರಾಮಪ್ರಸಾದ್, ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಬಳ್ಳಾರಿ ಡಯಟ್‌ನ ಉಪನ್ಯಾಸಕರಾದ ರಾಜು ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಂ.ಚನ್ನಬಸಪ್ಪ, ಉಪನ್ಯಾಸಕರಾದ ನಾಗರತ್ನಬಾಯಿ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಸೇರಿದಂತೆ ಇನ್ನಿತರರು ಭಾಗಿಯಾಗಿದ್ದರು.

## ವಿಜ್ಞಾನ

# ಚಿಕ್ಕ ವಯಸ್ಸಿನಲ್ಲಿ ಕೂದಲು ಬಿಳಿಯಾಗುವುದೇಕೆ?

**ಆರ್.ಬಿ.ಗುರುಬಸವರಾಜ**

ಶಮಂತನಿಗೆ 12 ವರ್ಷ. ಆಗಲೇ ತಲೆಯಲ್ಲಿ ಬಿಳಿಕೂದಲು ಎದ್ದು ಕಾಣುತ್ತಿವೆ. ಗೆಳೆಯರೆಲ್ಲ 'ವೈಟ್‌ಹೇರ್ಸ್' ಎಂದು ಅಣಕಿಸುತ್ತಾರೆ. ಕಳೆದ ಎರಡು ವರ್ಷಗಳಿಂದ ಅವನಿಗೆ ಇದೊಂದು ಸಂಕೋಚದ ಪರಿಸ್ಥಿತಿ ಎನ್ನುವಂತಾಗಿದೆ. ಹೌದು ಇತ್ತೀಚಿನ ವರ್ಷಗಳಲ್ಲಿ ಇದೊಂದು ಸಾಮಾನ್ಯ ಸಂಗತಿ ಎನ್ನುವಂತಾಗಿದೆ. ಬಹುತೇಕ ಚಿಕ್ಕವಯಸ್ಸಿನವರು ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಇದರಿಂದ ಅವರು ಖಿನ್ನತೆಗೆ ಒಳಗಾಗುತ್ತಿದ್ದಾರೆ. ಹಾಗಾದರೆ ಚಿಕ್ಕ ವಯಸ್ಸಿನಲ್ಲಿ ಕೂದಲು ಬಿಳಿಯಾಗಲು ಕಾರಣವೇನೆಂದು ತಿಳಿಯೋಣ.



ನಮ್ಮ ಕೂದಲು ಅದರ ನೈಸರ್ಗಿಕ ಬಣ್ಣವನ್ನು 'ಮೆಲನಿನ್' ಎಂಬ ವರ್ಣದ್ರವ್ಯದಿಂದ ಪಡೆಯುತ್ತದೆ. ಇದು 'ಮೆಲನೋಸೈಟ್ಸ್' ಎಂಬ ವಿಶೇಷ ಜೀವಕೋಶಗಳಿಂದ ಉತ್ಪತ್ತಿ ಯಾಗುವ ವರ್ಣ ದ್ರವ್ಯವಾಗಿದೆ. ನಾವು ವಯಸ್ಸಾದಂತೆ, ಈ ಜೀವ ಕೋಶಗಳು ಕ್ರಮೇಣ ಕಡಿಮೆ ಮೆಲನಿನ್ ಅನ್ನು ಉತ್ಪತ್ತಿ ಮಾಡುತ್ತವೆ. ಇದರಿಂದಾಗಿ ಕೂದಲು ಕ್ರಮೇಣ ಬಿಳಿಯಾಗುತ್ತದೆ. ಆದಾಗ್ಯೂ ಕೆಲವರು ಅಕಾಲಿಕ ಬೂದುಬಣ್ಣವನ್ನು ಅನುಭವಿಸಬಹುದು. ಅಂತಹವರಲ್ಲಿ ಮೆಲನೋಸೈಟ್ಗಳು ಚಿಕ್ಕವಯಸ್ಸಿನಲ್ಲಿ ಮೆಲನಿನ್ ಅನ್ನು ಉತ್ಪಾದಿಸುವುದನ್ನು ನಿಲ್ಲಿಸಿರುತ್ತವೆ.

ಅಕಾಲಿಕ ಬಿಳಿ ಕೂದಲುಗಳಿಗೆ ಅನುವಂಶಿಕತೆಯೂ ಕಾರಣವಾಗಿದೆ. ಅವರ ಕುಟುಂಬದ ಪೋಷಕರು ಅಥವಾ ಹಿರಿಯರು ಚಿಕ್ಕ ವಯಸ್ಸಿನಲ್ಲಿ ಬಿಳಿಕೂದಲು ಹೊಂದಿದ್ದರೆ ಅದು ಈಗಿನ ಪೀಳಿಗೆಗೂ ವರ್ಗಾವಣೆಯಾಗಿರಬಹುದು. ಅಕಾಲಿಕ ಬಿಳಿ ಕೂದಲಿಗೆ ಕಾರಣವಾಗುವ ಇತರ ಅಂಶಗಳೆಂದರೆ ಥೈರಾಯ್ಡ್ ಅಸ್ವಸ್ಥತೆಗಳು, ವಿಟಮಿನ್ ಕೊರತೆಗಳು ಮತ್ತು ಸ್ವಯಂ ನಿರೋಧಕ ಅಸ್ವಸ್ಥತೆಗಳಂತಹ ವೈದ್ಯಕೀಯ ಪರಿಸ್ಥಿತಿಗಳು, ಜೀವನಶೈಲಿಯ ಅಂಶಗಳಾದ ಧೂಮಪಾನ, ಕಳಪೆ ಆಹಾರ ಮತ್ತು ಹೆಚ್ಚಿನ ಒತ್ತಡದ ಮಟ್ಟಗಳು ಸಹ ಅಕಾಲಿಕ ಬಿಳಿ ಕೂದಲ ಸಮಸ್ಯೆಗೆ ಕಾರಣವಾಗಬಹುದು.

ಕೆಲವು ಸಂದರ್ಭಗಳಲ್ಲಿ 'ಅಲೋಪೆಸಿಯಾ ಅರೇಟಾ' ಎಂಬ ಸ್ಥಿತಿಯ ಕಾರಣದಿಂದಾಗಿ ಬಿಳಿ ಕೂದಲುಗಳು ಆಗಬಹುದು. ಇದು ಕೂದಲಿನ ಬುಡದಲ್ಲಿನ ಕಿರುಚೀಲಗಳ ಪ್ರತಿರಕ್ಷಣಾ ವ್ಯವಸ್ಥೆಯ ಮೇಲೆ ದಾಳಿ ಮಾಡುತ್ತದೆ. ಈ ಸಂದರ್ಭಗಳಲ್ಲಿ ಕೂದಲು ಉದುರುವಿಕೆ ಮತ್ತು ಬಿಳಿಕೂದಲು ಏಕಕಾಲದಲ್ಲಿ ಸಂಭವಿಸಬಹುದು.

ಅಕಾಲಿಕ ಬಿಳಿಕೂದಲನ್ನು ತಡೆಗಟ್ಟಲು ಯಾವುದೇ ಖಚಿತವಾದ ಮಾರ್ಗವಿಲ್ಲದಿದ್ದರೂ, ಆರೋಗ್ಯಕರ ಜೀವನಶೈಲಿ ಮತ್ತು ಒತ್ತಡ ರಹಿತ ಜೀವನ ನಿರ್ವಹಣೆಯಿಂದ ಬಿಳಿಕೂದಲು ಆಗುವಿಕೆಯನ್ನು ನಿಧಾನಗೊಳಿಸಬಹುದು. ಇದರಾಚೆಯೂ ಇರುವ ಬಿಳಿಕೂದಲನ್ನು ಮರೆಮಾಚಲು ಸೌಂದರ್ಯ ವರ್ಧಕಗಳ ಆಯ್ಕೆಗಳಿವೆ. ಇಂತಹ ಸೌಂದರ್ಯ ವರ್ಧಕ ಬಳಸುವಾಗ ಅಗತ್ಯ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ.

## ಇಲಾಖೆ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ: ಡಿಸಿ ಮಿಶ್ರಾ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಕೋಟೆ ಪ್ರದೇಶದ ಸಂತ ಜಾನ್ ವಿದ್ಯಾಸಂಸ್ಥೆ ಪರೀಕ್ಷಾ ಕೇಂದ್ರದಲ್ಲಿ ಜೂ.07 ರಿಂದ 09 ರವರೆಗೆ ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ನಡೆಯುವ 2024 ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳು ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯ ಆವರಣವನ್ನು ಸಿಆರ್‌ಪಿಸಿ ಕಲಂ 144 ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಪರೀಕ್ಷೆಗಳು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಮತ್ತು ಮಧ್ಯಾಹ್ನ 02 ಗಂಟೆಯಿಂದ ಸಂಜೆ 04 ಗಂಟೆಯವರೆಗೆ ನಡೆಯಲಿದ್ದು, ಸದರಿ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಲಾಗಿದೆ. ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಪರೀಕ್ಷಾ ಕೇಂದ್ರಗಳ ಸುತ್ತ–ಮುತ್ತ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಆದೇಶಿಸಿದೆ. ಈ ಆದೇಶವು ಪರೀಕ್ಷಾ ಕಾರ್ಯ ನಿರ್ವಹಿಸುವ ಸಿಬ್ಬಂದಿಯವರಿಗೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

## ಗ್ರಾಮೀಣ ಗ್ರಂಥಾಲಯವು ವಿದ್ಯಾರ್ಥಿಗಳನ್ನು ಆಕರ್ಷಿಸುವಂತೆ ಮಾಡಿ : ಸಿಇಓ ರಾಹುಲ್

**ಹಂಪಿ ಟೈಮ್ಸ್ ಕೊಪ್ಪಳ:**

ಗ್ರಾಮ ಪಂಚಾಯತಿಯಲ್ಲಿನ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಣೆ ಮಾಡುವಂತೆ ಸೌಲಭ್ಯಗಳನ್ನು ಒದಗಿಸಿ ಎಂದು ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆಯ ಅವರು ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರಿಗೆ ಸೂಚಿಸಿದರು. ಗುರುವಾರದಂದು ಜಿಲ್ಲಾ ಪಂಚಾಯತ್‌ನ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ನಡೆದ ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮ ಪಂಚಾಯತಿಯ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಗ್ರಂಥಾಲಯ ಮೇಲ್ವಿಚಾರಕರಿಗೆ ಬಾಕಿ ಇರುವ ಕರವಸೂಲಿಯಲ್ಲಿ ಶೇ.6 ರಷ್ಟನ್ನು 09 ತಿಂಗಳಿಂದ ಕನಿಷ್ಠ ವೇತನದ ಕಾರ್ಮಿಕ ಇಲಾಖೆಯ ವ್ಯತ್ಯಾಸದ ಹಣ ಹಾಗೂ ತುಟ್ಟಿ ಭತ್ಯೆಯನ್ನು ಗ್ರಾಮ ಪಂಚಾಯತಿಯಿಂದ ಭರಿಸಬೇಕು. ಎಲ್ಲಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕಾಲ ಕಾಲಕ್ಕೆ ಗ್ರಂಥಾಲಯ ಮೇಲ್ವಿಚಾರಕರ ವೇತನವನ್ನು ಶಾಸನಬದ್ಧ ಖಾತೆಗೆ ಜಮಾ ಆದ ತಕ್ಷಣವೇ ಪಾವತಿಸಬೇಕು. ಗ್ರಂಥಾಲಯಕ್ಕೆ ಸುಸಜ್ಜಿತವಾದ ಕಟ್ಟಡ ವ್ಯವಸ್ಥೆ ಮಾಡಬೇಕು. ಎಲ್ಲಾ ಗ್ರಂಥಾಲಯ ಮೇಲ್ವಿಚಾರಕರೂ ಮೊಬೈಲ್ ಆ್ಯಪ್ ಆಧಾರಿತ ಹಾಜರಾತಿಯನ್ನು ಅಳವಡಿಸಿಕೊಳ್ಳಬೇಕು. ಜಿಲ್ಲೆಯಲ್ಲಿ 65 ಗ್ರಾಮ ಪಂಚಾಯತ ಗ್ರಂಥಾಲಯಗಳಲ್ಲಿ ಅನುಷ್ಠಾನ ಮಾಡಲಾಗಿದೆ. ಆ ಕಾರ್ಯಕ್ರಮಕ್ಕೆ ಡಿಜಿಟಲ್ ಸಂಪನ್ಮೂಲಗಳನ್ನು ಈಗಾಗಲೇ ನೀಡಲಾಗಿದೆ ಎಂದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA